Licence No. 60.
Licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೯–೦–೦.

ಸಂಪುಟ ೩೦ | ತಾರೀಕು ೨೯–೬–೧೯೩೧ನೇ ಶುಕ್ರವಾರ | ಸಂಚಿಕೆ ೫

ಭಾರತದಲ್ಲಾಗುತ್ತಿರುವ ಔದ್ಯೋಗಿಕ ಪ್ರಗತಿ.

ನೂಲು ಮತ್ತು ಬಟ್ಟೆ

ಹಿಂದುಸ್ಥಾನದಲ್ಲಿಯ ಸುಸಂಘಟಿತ ವಾದ ದೊಡ್ಡ ಉದ್ಯೋಗವೆಂದರೆ ಜವಳಿ ಗಿರಣಿಗಳದು. ೧೯೪೭ ರಿಂದ ೧೯೩೦ ವರೆಗೆ ಹಿಂದುಸ್ಥಾನದಲ್ಲಿ ಪ್ರತಿ ವರ್ಷ ಹುಟ್ಟುವಳಿಯಾದ ನೂಲು ಮತ್ತ ಬಟ್ಟೆ ಕೆಳಗಿನಂತಿದೆ:—

ವರ್ಷ	ನೂಲು (ಪೌಂಡು)	ಬಟ್ಟೆ (ಗಜ)
೧೯೪೭	೧೨೯,೯೫,೭೦೫	೩೭,೯೧,೯೧೪
೧೯೪೮	೧೪೪,೪೭,೬೧೬	೪೩,೧೨,೩೦೩
೧೯೪೯	೧೩೫,೫೯,೧೧೯	೩೯,೦೪,೨೦೩
೧೯೫೦	೧೧೧,೭೩,೦೩೬	೩೬,೬೭,೩೪೯

(ಅಂಕಿಗಳು ಸಾವಿರದಲ್ಲಿ)

ಈ ಅಂಕಿಸಳವನ್ನು ನೋಡಿದರೆ ೧೯೪೮ ರಲ್ಲಿ ಹುಟ್ಟುವಳಿ ತೀರ ಹೆಚ್ಚಿಗಿದ್ದುದೂ ೧೯೫೦ ರಲ್ಲಿ ತೀರ ಕಡಿಮೆ ಇದ್ದುದೂ ಕಂಡುಬರುವದು. ೧೯೫೦ ರಲ್ಲಿ ಉತ್ಪಾದನೆ ಕಡಿಮೆಯಾಗಲು ಕಾರಣನೆಂದರೆ ಹತ್ತಿಯ ಕೊರತೆ, ಕೆಲಸಗಾರರ ಮುಷ್ಕರ, ಕೆಲಸ ತಪ್ಪಿಸುವದು ಮೊದಲಾದದ್ದು. ಕಳೆದ ವರ್ಷ ಮುಂಬಯಿಯಲ್ಲಿ ಕಮತಾವಾದಿಗಳೂ ಕಮ್ಯುನಿಸ್ಟರೂ ಕೂಡಿ ನಡೆಸಿದ ಜವಳಿ ಕೆಲಸಗಾರ ಮುಷ್ಕರದಿಂದ ನೂಲಿನ ಉತ್ಪಾದನೆಯಲ್ಲಿ ಮತ್ತು ಬಟ್ಟೆಯ ಉತ್ಪಾದನೆಯನ್ನು ೮೦ ಲಕ್ಷ ಪೌಂಡು ನೂಲು ಇಪ್ಪತ್ತು ಕೋಟಿ ವಾರವತ್ತು ಲಕ್ಷ ಗಜ ಬಟ್ಟೆ ಕಡಿಮೆಯಾಯಿತಲ್ಲದೆ ಹದಿನಾರು ಕೋಟಿ ಐವತ್ತು ಲಕ್ಷ ರೂಪಾಯಿಗಳ ಹಾನಿಯೂಯಿತ.

ಹಿಂದುಸ್ಥಾನದಲ್ಲಿ ಈಗ ನಡೆದಿರುವ ಗಿರಣಿಗಳಿಗೆ ಪ್ರತಿ ವರ್ಷ ೪೨ ಲಕ್ಷ ಬೇಲು ಅರಳೆ ಬೇಕಾಗುತ್ತದೆ. ಇದರಲ್ಲಿ ೩೬ ಲಕ್ಷ ಬೇಲುಗಳು ನಮ್ಮ ದೇಶದಲ್ಲಿದ್ದು ನಯ ಬಟ್ಟೆಗಾಗಿ ೬ ಲಕ್ಷ ಬೇಲುಗಳನ್ನು ಈಜಿಪ್ತ, ಪೂರ್ವ ಆಫ್ರಿಕಾ ಮತ್ತು ಸುದಾನಗಳಿಂದ ತರಿಸಬೇಕಾಗುವದು. ದೇಶವಿಭಜನೆಯ ನಂತರ ಮತ್ತ ರೂಪಾಯಿಯ ಬೆಲೆ ಇಳಿಸಿದ ನಂತರ ಪಾಕಿಸ್ತಾನದ ಅರಳೆ ಬರುವದು ನಿಂತಿತ. ೧೯೫೦–೫೧ ರಲ್ಲಿ ನಮ್ಮ ದೇಶದಲ್ಲಿ ೩೨ ಲಕ್ಷ ಗಂಟು ಅರಳೆಯು ಉತ್ಪತ್ತಿಯಾಯಿತ. ಆದರಿಂದ ಕಡಿಮೆ ಬಿದ್ದ ಅರಳೆಯನ್ನು ಅವೇರಿಕೆಯಿಂದ ತರಿಸಬೇಕಾಯಿತು. ಈ ಅರಳೆಯಿಂದ ನಯ ಬಟ್ಟೆ ಹೊರಡುವದೇ ಇಲ್ಲಿಯ ಗಿರಣಿಗಳ ಸ್ವರೂಪವೇ ಬದಲಾಗಿದೆ. ೧೯೪೮–೪೯ ರ ವರೆಗೆ ನಯ ಮತ್ತ ಅತಿನಯವಾದ ಬಟ್ಟೆ ಅನುಕ್ರಮವಾಗಿ ನೂರಕ್ಕೆ ೨೨ ಮತ್ತು ೨೯ ರಷ್ಟು ಹೊರಡುತ್ತಿತ್ತು. ಆದರೆ ೧೯೫೦ ರಲ್ಲಿ ೧೦೦ ಕ್ಕೆ ೩೮ ಮತ್ತು ೪೦ ರಷ್ಟು ಉತ್ಪಾದಿಸಲ್ಪಟ್ಟಿತ್ತು. ಇದರಿಂದ ಉರಟು ಬಟ್ಟೆಯು ಉತ್ಪಾದನೆ ಕಡಿಮೆಯಾಯಿತ. ಹಿಂದುಸ್ಥಾನದಿಂದ ನಿರ್ಯಾತವಾಗುವ ಬಟ್ಟೆಯಲ್ಲಿ ೧೦೦ ಕ್ಕೆ ೪೨ ರಷ್ಟ ಒರಟು ಮತ್ತು ಮಧ್ಯಮ ತರಗತಿಯದು. ಇದರಿಂದ ಇಲ್ಲಿಯ ಜನರಿಗೆ ಆ ಬಟ್ಟೆ ಹೊರಿಯದೆ ನಯುವಾದ ಬಟ್ಟೆಯನ್ನೇ ಉಪಯೋಗಿಸಬೇಕಾಯಿತು.

ಒಕ್ಕಲಿಗರು ಹೆಚ್ಚು ಹತ್ತಿ ಬೆಳೆಯುವಂತೆ ಪ್ರೋತ್ಸಾಹವನ್ನು ಕೊಡುವದಕ್ಕಾಗಿ ಪ್ರತಿ ಖಂಡಿಗೆ ೧೫೦ ರೂಪಾಯಿ ಬೆಲೆ ಹೆಚ್ಚಿಸಲಾಯಿತು. ೧೯೫೦ ರ ಪ್ರಾರಂಭದಲ್ಲಿ ನೂಲು ಮತ್ತು ನೂಲಿನ ಬಟ್ಟೆಯ ನಿರ್ಯಾತವು ಅನಿಬಂಧವಾಗಿ ಸಾಗಲು ಸರಕಾರವು ಅನುಮತಿ ಕೊಟ್ಟಿತು. ಯಾಕೆಂದರೆ ಗಿರಣಿಗಳಲ್ಲಿ ಸಂಗ್ರಹವೂ ಬಹಳ ಷ್ಟಿತ್ತ. ಆದರೆ ಇದ್ದುದರ ಬಹುಭಾಗವು ನಿರ್ಯಾತವಾದುದರಿಂದ ಇಲ್ಲಿಯ ಜನರಿಗೆ ಬಟ್ಟೆಯಕೊರತೆಯುಂಟಾಗ ಹತ್ತಿತ.

೧೯೪೬ ರಿಂದ ೧೯೪೮ ರ ವರೆಗೆ ಕೈಮಗ್ಗಗಳಿಗೆ ಸಾಕಷ್ಟ ನೂಲಿನ ಪೂರೈಕೆಯಾಗುತ್ತಿತ್ತು. ಆದರೆ ೧೯೫೦ ರಲ್ಲಿ ಈ ಪೂರೈಕೆಯು ಕೇವಲ ೧೦೦ ಕ್ಕೆ ೫೨ ರಷ್ಟ ಮಾತ್ರ ಆಯಿತ. ಆನಂತರ ನೂಲಿನ ನಿರ್ಯಾತವನ್ನು ನಿಲ್ಲಿಸಲಾಯಿತು. ಮತ್ತು ತಮಗೆ ಇಷ್ಟ ಬಂದವರಿಗೆ ತಮ್ಮ ಉತ್ಪಾದನೆಯಲ್ಲಿ ೨/೩ ನೂಲನ್ನು ಕೊಡಬಹುದೆಂದು ಗಿರಣಿಯೊಡೆಯರಿಗೆ ಕೊಟ್ಟ ಸೌಲಭ್ಯವನ್ನೂ ನಿಲ್ಲಿಸಲಾಯಿತು. ಮತ್ತು ಹಲವು ಹೊಸ ಗಿರಣಿಗಳನ್ನೂ ಪ್ರಾರಂಭಿಸಲಾಯಿತು. ಈ ಗಿರಣಿಯೊಳಗಿಂದ ೨೫ ಲಕ್ಷ ಪೌಂಡು ನೂಲಿನ ಉತ್ಪಾದನೆಯೂ ಗಬಹುದೆಂದು ಲೆಕ್ಕ ಮಾಡಲಾಗಿದೆ. ಈಗ ಗಿರಣಿಗಳು ಬೇಕಾದಲ್ಲಿಂದ ಅರಳೆಯನ್ನು ಕೊಳ್ಳುವದಕ್ಕೂ ತಡೆಹಾಕಲಾಗಿದೆ.

ಕಲ್ಲಿದ್ದಲಿ

ನಮ್ಮ ದೇಶದ ಇನ್ನೊಂದು ಮಹತ್ವದ ಉತ್ಪಾದನೆಯೆಂದರೆ ಕಲ್ಲಿದ್ದಲಿ. ಇದೂ ನಿಯಂತ್ರಿತ ಉದ್ಯೋಗವಿದೆ ಕಲ್ಲಿದ್ದಲಿಗೆ ನಮ್ಮ ದೇಶದಲ್ಲಿ ಕೊರತೆ ಇಲ್ಲ.

ಕಲ್ಲಿದ್ದಲಿಯ ಉತ್ಪಾದನೆ:–

೧೯೪೮ ರಲ್ಲಿ ೩ ಕೋಟಿ ೯೭ ಲಕ್ಷ ಟನ್
೧೯೪೯ ರಲ್ಲಿ ೩ ಕೋಟಿ ೧೪ ಲಕ್ಷ ಟನ್
೧೯೫೦ ರಲ್ಲಿ ೩ ಕೋಟಿ ೧೯ ಲಕ್ಷ ಟನ್

ಈ ಪ್ರಕಾರ ಇದ್ದರೂ ಸಾಂಗೆಯು ಅನಾನುಕೂಲತೆಯು ಮೂಲಕ ದೇಶದ ಬೇರೆ ಬೇರೆ ಸ್ಥಳಗಳಿಗೆ ಇಂಧನ್ನು ಸಕಾಲಕ್ಕೆ ಕಳಿಸುವದಾಗಲಿಲ್ಲ. ಇಲ್ಲಿಂದ ಹಾಂಗಕಾಂಗ್, ಸಿಂಗಾಪುರ, ಬ್ರಹ್ಮದೇಶ, ಸಿಲೋನ ಈ ದೇಶಗಳಿಗೆ ನವ್ಕ ಕಲ್ಲಿದ್ದಲಿ ಹೋಗುತ್ತಿದ್ದು ಈ ವರ್ಷದಿಂದ ಆಸ್ಟ್ರೇಲಿಯಾ, ಜಪಾನ್, ಈಜಿಪ್ತ ಮತ್ತು ಏಡನಗಳಿಗೂ ಇಲ್ಲಿಂದ ಈ ಸಾಮಗ್ರಿಯು ಹೊಗಹತ್ತಿದೆ. ಮತ್ತು ಹೊಸ ಖರಾರಿನನ್ವಯ ಪಾಕಿಸ್ತಾನಕ್ಕೂ ಕೆಲಪ್ರಮಾಣದಲ್ಲಿ ಹೋಗಬಹುದು.

ಉಕ್ಕು ಮತ್ತು ಕಬ್ಬಿಣ.

೧೯೪೪ ರಲ್ಲಿ ೬೮ ಲಕ್ಷ ೩೦ ಸಾವಿರ ಟನ್ ಉಕ್ಕು ತಯಾರಾಗಿತ್ತು. ಅದು ೧೯೪೮ ರಲ್ಲಿ ೧೦೦ ಲಕ್ಷ ಟನ್ ಆಗಿ ಏರಿತು. ಆದರೂ ಕೋರಿಯಾ ಯುದ್ಧದ ಮೂಲಕ ಬೆಲೆಗಳು ಏರಿದ್ದರಿಂದ ೧೯೫೧ ರಲ್ಲಿ ೩ ಲಕ್ಷ ೬೭ ಸಾವಿರ ಟನ್ ಆಯಾತವಾದದ್ದು ೧೯೫೦ ರಲ್ಲಿ ೨ ಲಕ್ಷ ಒಳ ಸಾವಿರಕ್ಕಿಳಿಯಿತು. ಆದ್ದರಿಂದ ಉಕ್ಕಿನ ಕೊರತೆ ಕೆಲವಂಶದಲ್ಲಿ ಕಂಡು ಬಂತು. ಇಲ್ಲಿಯ ಉತ್ಪಾದನೆಯಿಂದ ರೇಲ್ವೆಗಳಿಗೆ ಬೇಕಾದಷ್ಟನ್ನು ಪೂರೈಸಲಾದರೂ ಜನತೆಗೆ ಮಾತ್ರ ಸಾಕಷ್ಟು ಲಭ್ಯವಾಗಲಿಲ್ಲ. ಆದ್ದರಿಂದ ಉಕ್ಕಿನ ವಿತರಣೆಯ ಪದ್ಧತಿಯಲ್ಲಿ ಬದಲು ಮಾಡಲಾಯಿತು.

ಹಿಂದುಸ್ಥಾನದಲ್ಲಿ, ಟಾಟಾ ಆಯರ್ನ್ ಆ್ಯಂಡ್ ಸ್ಟೀಲ್ ಕಂಪೆನಿ, ವೈಸೂರ್ ಆಯರ್ನ್ ವರ್ಕ್ಸ್ ಮತ್ತು ಬಂಗಾಲ ಸ್ಟೀಲ್ ಕಾರ್ಪೋರೇಶನ್ ಇವು ಉಕ್ಕಿನ ಉತ್ಪಾದನೆ ಮಾಡುವ ಮೂರು ಸಂಸ್ಥೆಗಳು. ಇದರಲ್ಲಿ ಟಾಟಾ ಕಂಪೆನಿಯವರು ಪ್ರತಿ ವರ್ಷ ೧೮ ಲಕ್ಷ ೮೧ ಸಾವಿರ ಟನ್ ಉಕ್ಕು ತಯಾರು ಮಾಡುವ ಹೊಸ ಯೋಜನೆಯೊಂದನ್ನು ಸಿದ್ಧಪಡಿಸಿದ್ದು ಅದಕ್ಕೆ ೨೫ ಕೋಟಿ ರೂಪಾಯಿಗಳು ತಗಲುವವು. ಇದರಲ್ಲಿ ಅರ್ಧ ಹಣವನ್ನು ಹಿಂದುಸ್ಥಾನ ಸರಕಾರವು ಕೊಡಲಿದ್ದು ಇನ್ನರ್ಧವನ್ನು ಕಂಪೆನಿಯು ಶೇಖರಿಸುವದು. ಈ ಕಾರಖಾನೆಯಿಂದ ಹೊರಡುವ ಮುಖ್ಯ ವಸ್ತುಗಳೆಂದರೆ ನೀರಿನ ಕೊಳವೆಗಳು.

ಮೈಸೂರು ಕಾರಖಾನೆಗೂ ಹಿಂದುಸ್ಥಾನ ಸರಕಾರವು ಸಾಲ ಕೊಡಲು ಒಪ್ಪಿದ್ದು ಅಲ್ಲಿ ಪ್ರತಿ ವರ್ಷ ೭೦ ಸಾವಿರ ಟನ್ ಉಕ್ಕು ಹೆಚ್ಚಾಗಿ ಉತ್ಪಾದಿಸಲ್ಪಡುವದು.

ಬಂಗಾಲ ಸ್ಟೀಲ ಕಾರ್ಪೋರೇಶನದವರು ಮತ್ತೆ ಎರಡು ಕೋಟಿ ಹೆಚ್ಚಿನ ಬಂಡವಾಳವನ್ನು ಹಾಕಿ ತಮ್ಮ ಉತ್ಪಾದನೆ ಹೆಚ್ಚಿಸಲಿದ್ದಾರೆ.

ಸಿಮೆಂಟ್.

೧೯೪೪ ರಲ್ಲಿ ೧೧ ಲಕ್ಷ ಟನ್ ಸಿಮೆಂಟಿನ ಉತ್ಪಾದನೆಯಾಗಿತ್ತು ಆದರೆ ೧೯೫೦ ರಲ್ಲಿ ಅದರ ಇನ್ನೂಡಿಗಿಂತ ಹೆಚ್ಚು ಅಂದರೆ ೨೬ ಲಕ್ಷ ಟನ್ ಉತ್ಪಾದಿಸಲಟ್ಟಿತು. ಹಿಂದುಸ್ಥಾನದಲ್ಲಿ ಒಟ್ಟು ೨೧ ಸಿಮೆಂಟ್ ಕಾರಖಾನೆಗಳಿದ್ದು ಅವೆಲ್ಲವೂ ತಮ್ಮ ಉತ್ಪಾದನೆ ಹೆಚ್ಚಿಸಿವೆ. ಈಗ ಮತ್ತೆ ೯ ಕಾರಖಾನೆಗಳ ಯೋಜನೆ ಪೂರ್ತಿಯಾಗಲಿದ್ದು ಈ ವರ್ಷದಲ್ಲಿ ಮತ್ತೆ ೧೦ ಲಕ್ಷ ಟನ್ನಿನ ವರೆಗೆ ಉತ್ಪಾದನೆ ಹೆಚ್ಚಬಹುದು. ಇಲ್ಲಿಂದ ಪರದೇಶಗಳಿಗೂ ಸಿಮೆಂಟಿನ ನಿರ್ಯಾತ ನಡೆದೇ ಇದೆ. ಹೋದ ವರ್ಷ ೪೦ ಸಾವಿರ ಟನ್ ಸಿಮೆಂಟನ್ನು ಪರದೇಶಗಳಿಗೆ ನಿರ್ಯಾತ ಮಾಡಲಾಯಿತು.

ಉಪ್ಪು,

ಹಿಂದುಸ್ಥಾನದಲ್ಲಿ ಒಟ್ಟು ೪೪೭ ಉಪ್ಪಿನ ನಿರ್ಮಿತಿ ಕೇಂದ್ರಗಳಿವೆ. ಇವು ೧೫೬ ಗುಂಪುಗಳಲ್ಲಿ ಇವೆ. ಅವುಗಳಲ್ಲಿ ೨೦ ಕೇಂದ್ರ ಸರಕಾರದ ಒಡೆತನದ್ದಿವೆ. ಉಳಿದವು ಸರಕಾರದ ಒಡೆತನದ ಭೂಮಿಯಲ್ಲಿವೆ. ೧೯೪೮ ರಲ್ಲಿ ಉಪ್ಪಿನ ಈ ಕ್ಷೇತ್ರವು ೫೧,೪೪ ಇದ್ದದ್ದು ಈಗ ೫೫,೬೧ ಏಕರೆಗಳ ವರೆಗೆ ಪಸರಿಸಿದೆ. ೧೯೪೭ ರಿಂದ ಪ್ರತಿ ವರ್ಷ ಕೆಳಗಿನಂತೆ ಉತ್ಪಾದನೆಯಾಯಿತು.

೧೯೪೭ ರಲ್ಲಿ ೫೧೬ ಲಕ್ಷ ಮಣ
೧೯೪೮ ,, ೬೩೫ ,, ,,
೧೯೪೯ ,, ೫೫೬ ,, ,,
೧೯೫೦ ,, ೬೧೩ ,, ,,

ಇದರಲ್ಲಿ ವಧ್ಯವರ್ತಿ ಸರಕಾರದ ಉತ್ಪಾದನ ಕೇಂದ್ರದಲ್ಲಿ ೧೦೦ ಕ್ಕೆ ೨೭ ರಷ್ಟಾಗುತ್ತಿದ್ದು ವಧ್ಯವರ್ತಿ ಸರಕಾರದ ಮುಖಾಂತರ ೧೦೦ ಕ್ಕೆ ೬೦ ರಷ್ಟು ಆಗುತ್ತದೆ.

ಪ್ರಪಂಚದಲ್ಲಿ ಪ್ರತಿ ವರ್ಷ ಪ್ರತಿಯೊಬ್ಬನು ಉಪಯೋಗಿಸುವದು ೩೦ ಪೌಂಡು ಉಪ್ಪು. ಹಿಂದುಸ್ಥಾನದಲ್ಲಿ ವರ್ಷಕ್ಕೆ ಪ್ರತಿಯೊಬ್ಬನ ಪ್ರಮಾಣ ೧೪ ಪೌಂಡು ಇದೆ. ಮದ್ರಾಸದಲ್ಲಿ ಮಾತ್ರ ೨೦-ಪೌಂಡು ಇದೆ. ಈ ಲೆಕ್ಕದ ಮೇಲಿಂದ ೧೯೫೦ ರಲ್ಲಿ ಹಿಂದುಸ್ಥಾನಕ್ಕೆ ೬೩ ಲಕ್ಷ ಮಣ ಸಾಗುತ್ತಿತ್ತು. ಆದರೆ ಸೋಡಾ ಆ್ಯಶ್‌ಕ್ಕೆ ಹೆಚ್ಚು ಉಪ್ಪು ಬೇಕಾಗುವದು ಆದುದರಿಂದ ಹೋದ ವರ್ಷ ೪೩ ಲಕ್ಷ ಮಣ ಉಪ್ಪನ್ನು ಪರದೇಶಗಳಿಂದ ತರಿಸಲಾಯಿತು. ಒಂದು ಲಕ್ಷ ಮಣ ಸೈಂಧವಲವಣವನ್ನು ಪಾಕಿಸ್ತಾನದಿಂದ ತರಿಸಲಾಯಿತು. ಮತ್ತು ಇದರಲ್ಲಿ ೫ ಲಕ್ಷ ಮಣವನ್ನು ಜಪಾನಕ್ಕೂ ೨೪ ಲಕ್ಷ ಮಣವನ್ನು ಪೂರ್ವ ಪಾಕಿಸ್ತಾನಕ್ಕೂ ಕಳಿಸಲಾಯಿತು.

ಕಾಗದ

ಕಾಗದದ ಉತ್ಪಾದನೆ ಬಳಕೆಗಳಲ್ಲಿ ಹಿಂದುಸ್ಥಾನವು ಸ್ವಾವಲಂಬಿಯಾಗಿಲ್ಲ ವೃತ್ತಪತ್ರಿಕೆಗಳಿಗೆ ಬೇಕಾಗುವ ಕಾಗದಕ್ಕಂತೂ ನಾವು ಸಂಪೂರ್ಣ ಪರಾಶಲಂಬಿಗಳಾಗಿದ್ದೇವೆ. ಮಧ್ಯಪ್ರದೇಶದಲ್ಲಿ ವೃತ್ತಪತ್ರಿಕ ಕಾಗದದ ಗಿರಣಿಯೊಂದು ೧೯೫೨ ರಷ್ಟರಲ್ಲಿ ಪ್ರಾರಂಭವಾಗಲಿದು ಅಲ್ಲಿ ಪ್ರತಿ ವರ್ಷ ಸುಮಾರು ೫೦ ಸಾವಿರ ಟನ್ ಕಾಗದದ ಉತ್ಪಾದನೆಯಾಗಬಹುದೆಂದು ಅಂದಾಜು ಇದೆ. ಕಾಗದದ ಉತ್ಪಾದನೆ ಕೆಳಗಿನಂತಿದೆ—

೧೯೪೮ ರಲ್ಲಿ ೯೮,೬೦೦ ಟನ್
೧೯೪೯ ,, ೧,೦೩,೪೦೦ ,,
೧೯೫೦ ,, ೧,೦೮,೯೦೭ ,,

ಇಷ್ಟು ಕಾಗದದ ಉತ್ಪಾದನೆ ನಮ್ಮ ದೇಶದಲ್ಲಾಯಿತ. ಈ ರೀತಿಯಾಗಿ ನಮ್ಮ ಔದ್ಯೋಗಿಕ ಕ್ಷೇತ್ರದಲ್ಲಿ ಪ್ರಗತಿಯಾಗಿದ್ದುದು ಕಂಡು ಬಂದರೂ ಇನ್ನೂ ಸ್ವಾವಲಂಬಿಯಾಗುವದಕ್ಕೆ ಸಾಧಿಸಲು ಹಲವಿದೆ.

'ಜೈ ಹಿಂದ್'

ವಿವಾಹ ಮತ್ತು ಕುಟುಂಬ.

ಓರ್ವ ಸ್ತ್ರೀ ಮತ್ತು ಓರ್ವ ಪುರುಷನು ಜೀವನದಲ್ಲಿ ಒಂದಾಗಿ ಬಾಳುವಂತೆ ಮಾಡುವ ಬಂಧನವಾದ ವಿವಾಹವು ಕಾಲ ಕಾಲಕ್ಕೆ ಅನೇಕ ಪರಿವರ್ತನೆಗಳಿಗೆ ಒಳಗಾಗಿತ್ತು ಅಥವ ಸ್ಥಾನಮಾನಗಳು ಬದಲಾವಣೆ ಹೊಂದಿವೆ. ವಿವಾಹವೆಂಬುದರ ಆವಶ್ಯಕತೆಯು ಒಂದು ಕಾಲದಲ್ಲಿ ಒಂದಾಗಿದ್ದರೆ ಇನ್ನೊಂದು ಕಾಲದಲ್ಲಿ ಮತ್ತೊಂದಾಗಿತ್ತು. ಇಂದು ವಿವಾಹವೆಂಬುದರ ತಾತ್ಪರ್ಯವು ಸಾವಿರಾರು ವರ್ಷಗಳ ಹಿಂದೆ ಅದೇ ಪದಕ್ಕಿದ್ದ ಅರ್ಥಕ್ಕಿಂತ ತೀರಾ ಭಿನ್ನವಾಗಿದೆ. ಮುಂದಿನ ಜನಾಂಗವು ವಿವಾಹವೆಂಬುದನ್ನು ಯಾವ ದೃಷ್ಟಿಯಿಂದ ನೋಡಬಹುದು ಎಂದು ಈಗ ತರ್ಕಿಸುವುದು ಅಸಾಧ್ಯವಿದೆ.

ವಿವಾಹ ಬಂಧನವನ್ನು ಜೀವಿತ ಕಾಲದಲ್ಲಿ ಮುರಿದು ಬಿಡುವುದು ಅಸಾಧ್ಯವೆಂದು ನಮ್ಮ ಪೂರ್ವಜನರು ತಿಳಿದುಕೊಂಡಿದ್ದರು. ವಿವಾಹೇತರವಲ್ಲದೆ ಇತರ ಸ್ತ್ರೀಪುರುಷರ ಸಂಬಂಧಗಳು ಅಶ್ಲೀಲವಾಗೂ ಪಾಪವೆಂದು ಪರಿಗಣಿಸಲ್ಪಡುತಿತ್ತು. ಸ್ತ್ರೀಯು ಓರ್ವ ಪುರುಷನ ಕೈ ಹಿಡಿದ ನಂತರದಲ್ಲಿ ತನ್ನ ಅಂತ್ಯದ ತನಕ ಅವನನ್ನು ಅವಲಂಬಿಸತಕ್ಕದೆಂದು ಧಾರ್ಮಿಕ ಕಾಯಿದೆಗಳೆದ್ದುವು. ಈ ನಿಯಮವನ್ನು ಉಲ್ಲಂಘಿಸಿದವರು ರೌರವ ನರಕಕ್ಕೆ ಹೋಗುವರೆಂದು ಭೀತಿಯಿತ್ತು. ಸಮಾಜವು ಈ ನಿಯಮವನ್ನು ವ್ಯಕ್ತಿಗಳ ಮೇಲೆ ಹೊರಿಸಿತ್ತು.

ಮನುಷ್ಯನು ತಲಾಂತರಗಳಿಂದ ಅನೇಕ ಮೂಢಾಚಾರಗಳಿಗೆ ಒಳಗಾಗುವಾಗ ಸಂಸಾರಿಕ ಜೀವನದಲ್ಲೂ ಅನೇಕ ಬದಲಾವಣೆಗಳು ಆದುವು. ಪುರಾತನ ನಿಯಮಗಳು, ಕಟ್ಟು ಕಟ್ಟಳೆಗಳು ಆಧುನಿಕ ರೀತಿನೀತಿಗಳಿಗೆ ದಾರಿಕೊಟ್ಟು ಮೂಲೆ ಪಾಲಾದುವು. ಸಮಾಜವು ವಿವಾಹವನ್ನು ಆಧುನಿಕ ದೃಷ್ಟಿಯಿಂದ ನೋಡತೊಡಗಿತು. ಆರ್ಥಿಕ ಸ್ಥಿತಿಗತಿಗಳಿಗನುಗುಣವಾಗಿ ಮನುಷ್ಯನು ವಿವಾಹವೆಂಬ ಶಬ್ದದ ಅರ್ಥವನ್ನೇ ಬದಲಾಯಿಸಿದನು. ಪ್ರಜಾಪ್ರಭುತ್ವದ ತಳಹದಿಯ ಮೇಲೆಗೆ ರಚಿಸಲ್ಪಟ್ಟ ಸರಕಾರಗಳು ವಿವಾಹ ಪದ್ಧತಿಗಳಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಿದವು. ಸ್ತ್ರೀಪುರುಷರ ಸಂಬಂಧವನ್ನು ಪ್ರತ್ಯೇಕ ದೃಷ್ಟಿಯಿಂದಲೆ ನೋಡಲಾಯಿತು.

ಇಂದಿನ ವಿವಾಹ ಪುರಾತನದ ಕಟ್ಟು ಕಟ್ಟಳೆಗಳ ಪ್ರಕಾರ ನಡೆಯುವಂತಾದ್ದಲ್ಲ. ದಂಪತಿಗಳಾದವರು ಅಂಧಶ್ರದ್ಧೆಗೆ ಬಲಿಯಾಗುವಷ್ಟು ಮೂಢರಲ್ಲ. ವಿವಾಹವೆಂಬುದು ಇಬ್ಬರ ನಡುವೆ ಒಪ್ಪಂದ ಮಾತ್ರ; ಅವನ್ನು ಬೇಕಾದಾಗ ಮುರಿಯಬಹುದ; ಅದೆಂದಿಗೂ ಜನ್ಮಜನ್ಮಾಂತರಗಳ ಬಂಧನವಲ್ಲ ಎಂದು ಜನ ತಿಳಿದಿದ್ದಾರೆ. ಗಂಡನ ದಬ್ಬಾಳಿಕೆಯನ್ನು ಎದುರಾಡದೆ ಸಹಿಸಿ ಮೂಕ ಪಶುವಿನಂತೆ ಹೇಡಿತನ ಬಾಳಬೇಕೆಂದಿಲ್ಲ ದುರಾಚಾರಿ ಪುರುಷನ ಅಡಿಯಾಳಾಗಿಯೇ ಜೀವಿಸಬೇಕೆಂದಿಲ್ಲ. ತನ್ನ ಹಿತಕ್ಕಾಗಿ, ತನ್ನ ವಿನೋದನೆಗಾಗಿ ಸ್ತ್ರೀ ಎಲ್ಲ ಬಂಧನಗಳನ್ನು ಹಂದೊಗೆದು ತನ್ನ ಇಚ್ಛಾನುಸಾರ ವರ್ತಿಸಬಹುದಾಗಿದೆ. ಹೆಂಡತಿಯನ್ನು ಸಾಕಲಾರದ ಗಂಡನು ಅಪರಾಧಿಯಾಗುವನು.

ಇವನ್ನೆಲ್ಲಾ ನೋಡುವಾಗ ಸ್ತ್ರೀಯರಿಗೆ ಸಮಾಜದಲ್ಲಿ ಹೆಚ್ಚಿನ ಸ್ವತಂತ್ರ ಸಿಕ್ಕಿದೆ ಎಂಬ ಸಂಗತಿ ಸ್ಪಷ್ಟವಾಗಿ ಹೊಳೆಯುತ್ತದೆ. ಇದೇ ರೀತಿಯಲ್ಲಿ ಹೆತ್ತವರ ಮತ್ತು ಮಕ್ಕಳ ನಡುವಣ ಸಂಬಂಧದಲ್ಲಿಯೂ ಬದಲಾವಣೆಗಳಾಗಿವೆ. ಹೆಚ್ಚಿದಾರಭ್ಯದಿಂದ ಸಾಯುವ ತನಕ ಮಕ್ಕಳು ತಂಪೆ ತಾಯಿಗಳ ಆಜ್ಞಾಪಾಲಕರಾಗಬೇಕೆಂದಿಲ್ಲ. ಪ್ರಾಯ ಬಂದ ನಂತರ ಮಕ್ಕಳು ತಮ್ಮ ಜ್ಞೆಯಿಂದ ತಮ್ಮ ಜೀವನವನ್ನು ರೂಪುಗೊಳಿಸಬಹುದು. ಗಂಡು ಮಕ್ಕಳು ತಮಗೆ ಬೇಕಾದ ಹೆಂಡಗಿಯರನ್ನು ವಿವಾಹವಾಗಬಹುದು. ಹೆಣ್ಣು ಮಕ್ಕಳು ಬೇಕಾದ ವರನನ್ನು ಪಡೆಯುವಷ್ಟು ಸ್ವತಂತ್ರರಿರುವರು.

ಮನುಷ್ಯನು ವಿವಾಹದ ಅರ್ಥವನ್ನು ಬದಲಾಯಿಸಿರುವಾಗ ಆ ವಿವಾಹದಿಂದ ವ್ಯಕ್ತಿಗೆ ಅಥವಾ ಸಮಾಜಕ್ಕೆ ಹಿತವಾಗಿದೆಯೇ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುವಾಗ ಇಂದಿನ ವಿವಾಹಗಳಿಂದ ಅನೇಕ ಸಂಸಾರಗಳು ಸಂಕಷ್ಟಗಳೆಂಬ ಬಂಡೆಗೆ ತಗಲಿ ನುಚ್ಚುನೂರಾಗಿವೆ ವಿವಾಹ ವಿಚ್ಛೇದನೆಗಳು ಹೆಚ್ಚಿವೆ. ಗಂಡ ಹೆಂಡಂದಿರು ಮನೆಯಲ್ಲಿ ಜಗಳಾಡುವ ಬದಲಾಗಿ ನ್ಯಾಯಾಲಯಗಳ ಮುಂದೆ ತಮ್ಮ ವಿವಾದಗಳನ್ನು ಹಾಕಿ ಅವಹೇಳನೀಯ ಪ್ರಸಂಗಗಳನ್ನು ತಂದೊಡ್ಡುತ್ತಿದ್ದಾರೆ ಎಂದು ಸ್ಪಷ್ಟವಾಗಿ ಕಾಣುತ್ತಲಿದೆ. ಆಧುನಿಕ ರೀತಿಯಲ್ಲಿ ವಿವಾಹ ಬಂಧನಕ್ಕೆ ಸಿಲುಕಿದವರು ಶೀಘ್ರದಲ್ಲೇ ವಿವಾಹ ವಿಚ್ಛೇದನೆಯನ್ನು ಅಪೇಕ್ಷಿಸುತ್ತಲಿದ್ದಾರೆ. ವಿವಾಹ ವಿಚ್ಛೇದನೆಯನ್ನು ಮಾಡಿಕೊಳ್ಳುವವರ ಸಂಖ್ಯೆ ಮತ್ತು ಮರುವಿವಾಹ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತ ಬರುತ್ತಲಿದೆ.

ಹಿಂದಿನ ಕಾಲದಲ್ಲಿ ಎಳೇ ಪ್ರಾಯದಲ್ಲೇ ವಿವಾಹಗಳು ನಡೆಯುತ್ತಿದ್ದುವು. ಈಗಲಾದರೂ ಎಳೇ ಪ್ರಾಯದವರಿಗೆ ಮದುವೆಯಾಗುವುದೇ ಕಂಡುಬರುವುದಿಲ್ಲ. ಬಡ ಕುಟುಂಬದಲ್ಲಿ ಎಳೇ ಪ್ರಾಯದಲ್ಲಿ ವಿವಾಹಗಳಾಗುವುದಾದರೂ ಐಶ್ವರ್ಯವಂತರು ಮದುವೆಯಾಗುವುದನ್ನು ಆದಷ್ಟು ಮುಂದೂಡುತ್ತಲಿದ್ದಾರೆ. ಹೆಣ್ಣು ಗಂಡುಗಳ ವಿವಾಹ ಪ್ರಾಯ ಏರಿಕೆಯಲ್ಲಿದೆ.

ವರದಕ್ಷಿಣೆ ಪಡೆಯುವ ಪದ್ಧತಿಯನ್ನು ನಿರ್ಮೂಲನ ಮಾಡಬೇಕೆಂದು ಸರಕಾರವೂ, ಸಾಮಾಜಿಕ ಕಾರ್ಯಕರ್ತರೂ ಪ್ರಯತ್ನಿಸುತ್ತಿರುವರಾದರೂ ಶ್ರೀಮಂತ ಕುಟುಂಬಗಳಲ್ಲಿ ವರದಕ್ಷಿಣೆಯಿಲ್ಲದೆ ವಿವಾಹ ನಡೆಯುವಂತೆಯೇ ಇಲ್ಲ. ಪರಿಣಾಮವಾದ ಬಡ ಕುಟುಂಬಗಳು ತಮ್ಮ ಬೆಳೆಸಿದ ಹೆಣ್ಣುಗಳನ್ನು ಶಾಲಾ ಕಾಲೇಜುಗಳಿಗೆ ವಿದ್ಯಾರ್ಜನೆಗಾಗಿ ಕಳುಹಿಸುವ ಪರಿಸ್ಥಿತಿಗೆ ಬಂದೊದಗಿದೆ.

ಯುರೋಪು ಅಮೇರಿಕಾ ಮೊದಲಾದ ಪೌರ್ವಾತ್ಯ ರಾಷ್ಟ್ರಗಳ ಜನರು ಅವರ ಆರ್ಥಿಕ ಸ್ಥಿತಿಗತಿಗಳಿಗನುಗುಣವಾಗಿ ವಿವಾಹದ ಅವಶ್ಯಕತೆಯನ್ನು ನಿರ್ಧರಿಸಿರುತ್ತಾರೆ. ಸ್ತ್ರೀಯರಾಗಲಿ, ಪುರುಷರಾಗಲೀ ಆರ್ಥಿಕ ಸ್ವಾವಲಂಬನ ಹೊಂದದೆ ವಿವಾಹ ಬಂಧನಕ್ಕೆ ಸಿಲುಕಿ ಬೀಳುವುದಿಲ್ಲ. ಸಂಸಾರವು ಸುಖಮಯವಾಗಿ ಸಾಗುವುದಕ್ಕೆ ಮೊದಲಾಗಿ ತಮ್ಮ ಆರ್ಥಿಕ ಸ್ಥಿತಿಗತಿಗಳು ಭದ್ರವಿರತಕ್ಕದ್ದು ಎಂದೇ ಅವರು ಅಪೇಕ್ಷಿಸುತ್ತಾರೆ. ಆದುದರಿಂದ ವಿವಾಹ ಯೋಗ್ಯ ವಯಸ್ಸು ದಾಟಿದರೂ ಅನೇಕರು ತಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳ್ಳದೆ ಭಾವೀ ಕುಟುಂಬವು ಸುಖಪ್ರದವಾಗದೆಂಬ ಭಾವನೆ ಕಟ್ಟಿಕೊಂಡು ವಿವಾಹವಾಗುವಂತಿಲ್ಲ. ಆದುದರಿಂದ ವಿವಾಹಗಳೇ ಕಡಿಮೆಯಾಗಿವೆ. ಇದರಿಂದ ಜನನ ಸಂಖ್ಯೆಯೂ ಕಡಿಮೆಯಾಗಿದೆ. ಭಾರತದಲ್ಲಿ ಜನಸಂಖ್ಯೆಯೂ ಮತ್ತು ಆಹಾರಾಭಾವದ ಸಮಸ್ಯೆಗಳೂ ಇತ್ತೀಚೆಗೆ ತೀವ್ರವಾಗಿರುವಾಗ ವಿವಾಹಗಳು ಕಡಿಮೆಯಾಗುವುದು ಹಾಗೂ ತರುಣ ತರುಣಿಯರು ಆದಷ್ಟು ವಯಸ್ಸಿಗೆ ಅವಿವಾಹಿತರಾಗಿದ್ದಲ್ಲಿ ಹಿತಕಾರಿಯೆನಿಸುವುದು

ಹೀಗೆ ಮುಂದಿನ ವರ್ಷಗಳಲ್ಲಿ ವಿವಾಹದ ಅರ್ಥ, ಆದರ ಆವಶ್ಯಕತೆಗಳು ತೀರಾ ಬದಲಾವಣೆ ಹೊಂದುವುದು ಖಂಡಿತ. ಗಂಡು ಹೆಣ್ಣುಗಳ ಸಂಬಂಧದ ಉದ್ದೇಶ ಬದಲಾಗುವುದು. ಕಾಲದ ಬದಲಾವಣೆಯೊಡನೆ ಸಂಸಾರ ಬಂಧನದ ರೂಪವೂ ಆವಶ್ಯಕತೆಗಳೂ, ಬದಲಾವಣೆಗಳಿಗೆ ಒಳಗಾಗುವವು.

ನ. ಭಾ

ಡಿಫ್ತೀರಿಯಾ ಮತ್ತು ನಾಯಿ ಕೆಮ್ಮುಲ್ಲು.

[ಕೊಡಗು ವೈದ್ಯ ಇಲಾಖೆಯವರಿಂದ]

ಡಿಫ್ತೀರಿಯ ಖಾಯಿಲೆಯು ಕ್ರಿಮಿಗಳಿಂದುಂಟಾಗುವ ಗುಣ ಗಂಟಲಿನ ಒಂದು ಅಂಟುರೋಗ. ಈ ಕಾಯಿಲೆಯು ೧ ವರ್ಷದಿಂದ ೧೦ ವರ್ಷದ ಮಕ್ಕಳಲ್ಲಿ ಬಹಳ ಜಾಸ್ತಿಯಾಗಿ ಕಂಡು ಬರುವುದು. ಇದು ಹೆಚ್ಚಾಗಿ ಶರತ್ಕಾಲ ಮತ್ತು ಚಳಿಗಾಲದಲ್ಲಿ ಕಂಡು ಬರುವುದು. ಈ ಖಾಯಿಲೆಯು ಮಕ್ಕಳಿಂದ ಮಕ್ಕಳಿಗೆ ಕೆಮ್ಮುವಾಗ ಮತ್ತು ಮಾತನಾಡುವಾಗ ಹಾರುವ ಎಂಜಲು ಹನಿಗಳಿಂದ ಹರಡುತ್ತದೆ.

ಈ ಕಾಯಿಲೆಯು ಪ್ರಾರಂಭವಾದಾಗ ಮಗುವಿಗೆ ಶರೀರದಲ್ಲಿ ಆಲಸ್ಯ ಕಂಡು ಬರುತ್ತದೆ. ಊಟವೂಡಲು ಇಷ್ಟ ಪಡುವುದಿಲ್ಲ. ಶರೀರದ ಅಂಗಾಂಗಗಳಲ್ಲಿ ನೋವು ಕಂಡುಬರುತ್ತದೆ. ಸ್ವಲ್ಪ ಮಟ್ಟಿಗೆ ಜ್ವರವಿರುತ್ತದೆ. ಗಂಟಲಿನ ಒಳಗಿರುವ ಮಾಂಸ ಗ್ರಂಥಿಗಳ ಮೇಲೆ ಹಾಲಿನ ಕೆನೆಯ ರೂಪದಲ್ಲಿರುವ ತೆಳುವಾದ ಪೊರೆ ಕಂಡು ಬರುವುದು. ಮಗುವಿನ ಕತ್ತಿನಲ್ಲಿ ಹೊರಗಡೆ ಗ್ರಂಥಿಗಳು ದಪ್ಪವಾಗುವುವು. ಮಗುವು ಬಹಳ ನಿತ್ರಾಣದಲ್ಲಿದ್ದು ಪಾನೀಯಗಳನ್ನು ಕೂಡ ನುಂಗಲು ಕಷ್ಟಪಡುವುದು. ಹಾಗೆ ಮಾಡಿದರೂ ಅನೇಕ ಸಲ ಮೂಗಿನಿಂದ ಹೊರಗೆ ಬರುವುದು.

ಈ ಖಾಯಿಲೆಯು ಕಂಡು ಬಂದ ತಕ್ಷಣವೇ ಚಿಕಿತ್ಸೆ ಮಾಡಬೇಕು. ಒಂದೆರಡು ದಿನ ನಿಧಾನವಾದಲ್ಲು ಮಗುವಿನ ಪ್ರಾಣಕ್ಕೆ ಅಪಾಯವು ಒದಗ ಬಹುದು. ಆದ್ದರಿಂದ ಆಸ್ಪತ್ರೆಗೆ ಕರೆದು ತರುವುದು ಅಗತ್ಯಕರವಾದುದು.

ನಾಯಿ ಕೆಮ್ಮುಲ್ಲೂ ಕೂಡ ಡಿಫ್ತೀರಿಯಾ ಖಾಯಿಲೆಯಂತೆಯೇ ಚಿಕ್ಕ ಮಕ್ಕಳಲ್ಲಿ ಜಾಸ್ತಿಯಾಗಿ ಕಂಡು ಬರುವುದು ಮತ್ತು ಮಕ್ಕಳಿಂದ ಮಕ್ಕಳಿಗೆ ಕೆಮ್ಮುವಾಗ ಹಾರುವ ಎಂಜಲು ಹನಿಗಳಿಂದ ಹರಡುತ್ತದೆ.

ಈ ಖಾಯಿಲೆಯು ಮೊದಲಿನಲ್ಲಿ ಸಾಧಾರಣ ಶೀತ್ಮಲಿನಂತೆ ಸ್ವಲ್ಪ ಜ್ವರದಿಂದ ಪ್ರಾರಂಭವಾಗುವುದು. ಸ್ವಲ್ಪ ದಿನದಲ್ಲಿಯೇ ಈ ಕೆಮ್ಮುಲ್ಲು ಸೆಳೆತದ ರೂಪವನ್ನು ತಾಳಿ ವಾಂತಿಯಾಗಲು ಮೊದಲಾಗುವುದು. ಕೆಮ್ಮುವಾಗ ಶ್ವಾಸವು ಕಟ್ಟಿ ಕಣ್ಣು ಮೂಗಿನಲ್ಲಿ ನೀರು ಬರುವುದು. ಆನೇಕ ಸಲ ಮಕ್ಕಳಿಗೆ ಈ ಖಾಯಿಲೆಯು ಪರಿಣಾಮವಾಗಿ ಸನ್ನಿರೋಗ ಕಂಡುಬರುತ್ತದೆ. ಮೂಗಿನಲ್ಲಿ ರಕ್ತ ಸುರಿಯಲು ಮೊದಲಾಗುವುದು. ತಿಂದ ಆಹಾರವು ವಾಂತಿಯಾಗುವುದರಿಂದ ಶರೀರವು ಕ್ಷೀಣಿಸುವುದು. ಮತ್ತು ಬ್ರಾಂಕೋ ನ್ಯೂಮೋನಿಯೂ ಎಂಬ ಖಾಯಿಲೆಯು ಅನೇಕ ಸಲ ಸಂಭವಿಸಬಹುದು.

ಈ ಮೇಲೆ ಹೇಳಿದ ಖಾಯಿಲೆಗಳು ಬಾರದ ಹಾಗೆ ಚಿಕ್ಕ ಮಕ್ಕಳಿಗೆ ಇಂಜಕ್ಷನ್ ಕೊಡಬಹುದು. ಈ ತಿಂಗಳಿನ ಮಕ್ಕಳಿಗೂ ಕೂಡ ಇದನ್ನು ಮಾಡಿಸಬಹುದು. ಎರಡು ಖಾಯಿಲೆಗಳನ್ನೂ ಒಂದೇ ಇಂಜಕ್ಷನ್ ಕೊಡುವುದರ ಮೂಲಕ ತಡೆಗಟ್ಟಬಹುದು. ಇದಕ್ಕೆ ಹೆಸರು "ಡಿಫ್ತೀರಿಯಾ ಪರ್ಟುಸಿಸ್ ಕಂಬೈನ್ಡ್ ವ್ಯೋಫಿಲೇಕ್ಟಿಕ್ ವ್ಯಾಕ್ಸೀನ್" ಎಂದು. ಇದರ ಬೆಲೆಯು ಕೂಡ ಬಹಳ ಕಮ್ಮಿ. ಒಂದು ಬಾಟ್ಲಿಗೆ ಸುಮಾರು ೪ ರೂ ೧೨ ಆಣೆ. ಒಂದು ಬಾಟ್ಲಿನಲ್ಲಿ ಮೂರು ಮಕ್ಕಳಿಗೆ ಇಂಜಕ್ಷನ್ ಮಾಡಿಸಬಹುದು

ಈ ಖಾಯಿಲೆಗಳು ಬಂದ ಮೇಲೆ ಚಿಕಿತ್ಸೆಮಾಡುವುದಕ್ಕೆ ಹೆಚ್ಚಿನ ಕ್ರಮ ಮತ್ತು ಖರ್ಚು ಆಗುವುದರಿಂದ, ಕಡಿಮೆ ಖರ್ಚಿನಿಂದ ತಡೆಗಟ್ಟುವುದೇ ಉತ್ತಮವೆಂದು ಹೇಳಬೇಕಾದಿಲ್ಲ.

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಇಂದಿನ ಈ ಕಷ್ಟ ಜೀವನಕ್ಕೆ ಕಾರಣರಾರು?

ಲೇ:-'ಗುಪ್ತ' ಮಡಿಕೇರಿ

ದಿನದಿಂದ ದಿನಕ್ಕೆ ಏರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆಯಿಂದ ನನಗೆ ತಲೆತಿರುಗಿದಂತಾಗಿದೆ. ಜೀವನವೇ ಸಾಕೆನಿಸಿ ಹೋಗಿದೆ. ಸರಕಾರವು ಬೆಲೆಯನ್ನು ಹತೋಟಿಗೆ ತಂದು ಬಾಳನ್ನು ಹಗುರಗೊಳಿಸಬಹುದೆಂದು ನಿರೀಕ್ಷಿಸಿ ಸಾಕಾಗಿದೆ. ಸರಕಾರದ ಕೈಯಿಂದ ಏನೂ ಸಾಧಿಸಲಾಗುವುದಿಲ್ಲವೆಂಬ ನಂಬಿಕೆ ದಿನ ದಿನಕ್ಕೆ ಜೋರುತ್ತಿದೆ. ಸರಕಾರವು ನಿಯಂತ್ರಣ ಆಜ್ಞೆ ಮಾಡಿದರೂ ಅದು ಜಾರಿಯಲ್ಲಿ ಬರದೆ ನಮ್ಮ ಜೀವನ ಮಟ್ಟಿನ ಹಾಸಿಗೆಯೊಗುತ್ತಿರುವದನ್ನು ಅನುಭವಿಸಿ ಸಾಕಾಗಿದೆ. ಈ ಬೆಲೆಯ ಏರುವಿಕೆಗೆ ಕಾರಣವೇನೆಂದು ಹುಡುಕಲು ಹೊರಟು ಆ ಪ್ರಯತ್ನದಲ್ಲಿ ನನಗೆ ದೊರೆತ ಉತ್ತರ, ಅನುಭವಗಳನ್ನು ಎಲ್ಲರ ಗಮನಕ್ಕಾಗಿ ಬರೆಯುತ್ತಿರುವೆನು

ನಾನು ಅಕ್ಕಿ ಉಪಯೋಗಿಸುವವನಾದ್ದರಿಂದ ಮೊದಲಾಗಿ ಬತ್ತ ಬೆಳೆಸುವ ರೈತನಲ್ಲಿಗೆ ಹೋಗಿ ಬತ್ತದ ಬೆಲೆಯನ್ನು ಸ್ವಲ್ಪವಾದರೂ ಕಡಿಮೆ ಮಾಡಲೊಪ್ಪಿದರೆ ನಮಗೆ ಹಿತವಾಗುವದು; ದಯಮಾಡಿ ಹಾಗೆ ಮಾಡಿರೆಂದು ಕೇಳಿದೆನು. ಆದಕ್ಕೆ ರೈತನು ಈ ರೀತಿ ಉತ್ತರವಿತ್ತನು 'ಇಲ್ಲಿ ನೋಡಿ, ಬಡ ರೈತನು ದುಡಿದು ಜೆಳೆಸುವ ಧಾನ್ಯದ ಬೆಲೆ ಕಡಿಮೆ ಮಾಡಬೇಕೆಂದು ಕೂಗುವದು ಇಂದಿನ ಒಂದು ಫೇಶನಿನಂತಾಗಿದೆ. ಎಲ್ಲಿ ಯಾವ ಕಡೆ ಹೋದರೂ ಬಡ ರೈತನಿಗೆ ಪೆಟ್ಟು ಗುದ್ದುಗಳು. ರೈಲ್ವೆ, ಅಂಚೆ ಕೆಲಸಗಾರರ, ಗಿರಣಿ ಕಾರ್ಮಿಕರ ಸಂಘಗಳಿರುವಂತೆ ರೈತರಾದ ನಮಗೆ ಸಂಘ,ಸಂಸ್ಥೆಗಳಿಲ್ಲ. ನಮ್ಮಲ್ಲಿ ಒಗ್ಗಟ್ಟು ಇಲ್ಲ. ಅನಕ್ಷರಸ್ಥರಾಗಿ ಅವಿದ್ಯಾವಂತರಾಗಿರುವ ನಾವು ಸಂಘಟನೆ ಮಾಡಿಕೊಳ್ಳಲಾರೆವು. ಆದ್ದರಿಂದ ನಾವು ಬೆಳೆಸಿದ ಬತ್ತದ ಮೇಲೆ ಖಡ್ಡಾಯ ನಿಯಂತ್ರಣವಿದೆ. ಅದೇ ಅಲ್ಲ, ಅಧಿಕಾರಿಗಳು ತಮ್ಮ ಇಚ್ಛೆಯಂತೆ ಅಂದಾಜು ಮಾಡಿ ಮನೆಯಿಂದ ಕೊಂಡೊಯ್ಯುವರು. ನನ್ನ ಕಣಜದಲ್ಲಿ ೩೦ ಬಟ್ಟೆ ಬತ್ತವಿದ್ದರೆ ೭೦ ಬಟ್ಟೆ ಇದೆಯೆಂದು ಅಂದಾಜುಮಾಡಿ ೫೦ ಬಟ್ಟೆ ಸರಕಾರದ ವಶಕ್ಕೊಪ್ಪಿಸಬೇಕೆಂದು ಆಜ್ಞೆಮಾಡುವರು. ಪರಿಣಾಮವಾಗಿ ಬೆಳೆಸುವ ನಮಗೇ ಉಣಲು, ಮುಂದಿನ ವರ್ಷದ ಆರಂಭವಾಡಲು ಬೇಕಾದ ಧಾನ್ಯವಿಲ್ಲದಂತಾಗಿದೆ. ನಮಗೆ ಬೇಕಾದ ಇತರ ವಸ್ತುಗಳ ಬೆಲೆಗೆ ನಿಯಂತ್ರಣವಿದ್ದರೂ ಆ ಬೆಲೆಗೆ ನಮಗೆ ದೊರೆಯುವದಿಲ್ಲ. ಆದ್ದರಿಂದ ಬತ್ತದ ಬೆಲೆಯನ್ನು ಕಡಿಮೆ ಹಾಡಬೇಕೆನ್ನುವದರಲ್ಲಿ ಅರ್ಥವಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ವಿಪರೀತ ತೊಂದರೆಗೊಳಗಾದವರಿದ್ದರೆ ಅದು ರೈತರ ವರ್ಗ.' ರೈತನ ಈ ಮಾತು ನಿಜವೆಂದು ನನಗೆ ತೋರಿತು.

ಹಾಗಾದರೆ ಇತರ ವಸ್ತುಗಳ ಬೆಲೆ ಏರಿಸಲು ವ್ಯಾಪಾರಿಯೇ ಕಾರಣವಿರಬೇಕೆಂದು ಆತನಲ್ಲಿಗೆ ಹೋಗಿ "ಸಿಕ್ಕಾಬಟ್ಟೆ ವಸ್ತುಗಳ ಬೆಲೆ ಏಕೆ ಏರಿಸುವಿರಿ? ವಸ್ತುಗಳನ್ನು ಕಪ್ಪುಸಂತೆಯಲ್ಲಿ ಇಟ್ಟು ಮಾರಲಿಲ್ಲವೆಂದು ಏಕೆ ಹೇಳುವಿರಿ? ನೀವು ಲಾಭ ಮಾಡಿರಿ. ಆದರೆ ಅದಕ್ಕೂ ಒಂದು ಮಿತಿಯನ್ನಿಡಬಾರದೇ?" ಎಂದೆನು. ವ್ಯಾಪಾರಿ ಹೇಳತೊಡಗಿದನು. "ಈಗ ದುಡ್ಡೆಲ್ಲ ವ್ಯಾಪಾರಸ್ಥರಲ್ಲಿ. ಅವರೇ ಕೋಟ್ಯಾಧೀಶರು ಎಂದು ಹೇಳುವದನ್ನು ನೀವು ಕೇಳಿರಬಹುದು. ವ್ಯಾಪಾರಸ್ಥರು ಕಪ್ಪುಸಂತೆಯಲ್ಲಿ ಹಣ ರಾಶಿ ಹಾಕುತ್ತಿದ್ದಾರೆ ಎನ್ನುತ್ತಾರೆ. ಆದರೆ ಪರಿಶೀಲಿಸಿ ನೋಡಿದರೆ ನಮ್ಮ ವ್ಯಾಪಾರದಲ್ಲಿ ಲಾಭ ಬಹಳ ಕಡಿಮೆ. ಒಂದು ಹತ್ತು ಬೇಲು ಬಟ್ಟೆ ಬರಬೇಕಾದರೆ ಕಂಟ್ರೋಲರಲ್ಲಿಗೆ ಹತ್ತು ಸಾರಿ ಹೋಗಬೇಕು. ಆವರ ಆ ಫೀಸಿನ ಜವಾನನಿಂದ ಹಿಡಿದು ಎಲ್ಲರನ್ನೂ ಆವರವರ ಯೋಗ್ಯತೆಯಂತೆ ಕಂಡುಕೊಳ್ಳಬೇಕು. ಅಧಿಕಾರಿಯ ಆರ್ಧಾಂಗಿಗೆ ಅಮೂಲ್ಯ ಬಹುಮಾನಗಳನ್ನು ಕೊಡಬೇಕು ಇಷ್ಟೆಲ್ಲ ಆಗಿ ಬಟ್ಟೆ ಬಂದಾಗ ಹತ್ತಿರದ ಪೋಲೀಸ್ ಮತ್ತಿತರ ಅಧಿಕಾರಿಗಳು ತಮಗೆ ಬೇಕಾದ ಬಟ್ಟೆಯನ್ನು ಸಾಲವಾಗಿ ಮೊಲು ಪಡೆಯುತ್ತಾರೆ (ಆ ಹಣ ಕಡೆಗೆ ಬಾರದಿರಲೂ ಬಹುದು) ಹೀಗೆಲ್ಲ ಕಷ್ಟಪಟ್ಟು ದೊರೆತ ಬಟ್ಟೆಯನ್ನು ಸರಕಾರದ ನಿಯಂತ್ರಿತ ಬೆಲೆಗೆ ಮಾರಬೇಕು. ಅಯ್ಯೋ, ಈ ವ್ಯಾಪಾರದಿಂದ ನಮ್ಮ ಖರ್ಚು ಸಹ ಏಳುವದಿಲ್ಲ. ಈ ಖರ್ಚು ತುಂಬಿಕೊಳ್ಳುವ ಆಲೋಚನೆ ಮಾಡಿದರೆ ಅದನ್ನು ಕಪ್ಪುಸಂತೆ ಎಂದು ಶಿಕ್ಷಿಸುತ್ತಾರೆ. ಜೊತೆಗೆ ನಮ್ಮ ಲೆಕ್ಕ ಪತ್ರ ಬರೆಯಲು ಬೇರೆ ಗುಮಾಸ್ತರು ಬೇಕು. ಅದರ ಮೇಲೆ ಕಂದಾಯ, ಆದಾಯ ತೆರಿಗೆ ನೂರಾರು ಅವಾಂತರಗಳು. ವ್ಯಾಪಾರದ ಆಸುವರ್ಣ ಕಾಲ ಹೋಯಿತು. ಈಗ ವ್ಯಾಪಾರ ಮಾಡಿ ಅಸಲು ಉಳಿಸಿಕೊಂಡವನೇ ಜಾಣ."

ಈತನ ಮಾತುಗಳನ್ನು ಕೇಳಿ ನಮ್ಮೆಲ್ಲರ ದುರಂತಕ್ಕೆ ಸರಕಾರಿ ಅಧಿಕಾರಿಯೇ ಕಾರಣನಿರಬೇಕೆಂದು ಅಪ್ಪರ್ ಡಿವಿಜನಿನ ಕ್ಲಾರ್ಕರೊಬ್ಬರ ಹತ್ತಿರ ಹೋಗಿ ನನ್ನ ತೊಂದರೆ ತೊಡರುಗಳನ್ನು ಹೇಳಿಕೊಂಡೆನು. ಆತನು ಸರಕಾರಿ ಉದ್ಯೋಗಿಗಳ ಸ್ಥಿತಿಯನ್ನು ವರ್ಣಿಸತೊಡಗಿದನು. 'ಹೌದಯ್ಯ, ನಿಮ್ಮೆಲ್ಲರ ಕಣ್ಣು ಸರಕಾರಿ ಉದ್ಯೋಗಿಗಳ ಮೇಲೆ. ಎಲ್ಲರು ಟೀಕೆ ಮಾಡುವದು ಬಡ ನೌಕರರನ್ನೆ! ಅದು ಚಹಾದಂಗಡಿ ಇರಲಿ, ಸಾರ್ವಜನಿಕ ಸಭೆ ಇರಲಿ, ಯಾ ಕುಟುಂಬದ ಮಾತು ಕತೆ ಇರಲಿ, ಅಲ್ಲಿ ಈ ಸರಕಾರಿ ನೌಕರರ ಮಾತು ಬಾರದೆ ಇರದು. ಆದರೆ ಧರ್ಮಾವಲಂಬಿಗಳಾಗುವದರಿಂದ ಉಪವಾಸ ಬಿದ್ದು ಸಾಯುವದೆಂದರೆ ನಿಮ್ಮಲ್ಲಿ ಎಷ್ಟು ಜನರು ಧರ್ಮಪರಿಪಾಲನೆ ಮಾಡುವಿರಿ? ನನಗೆ ಸರ್ವಿಸು ಆಗುತ್ತಾ ಬಂದಿದ್ದರೂ ಇಂದೂ ನನಗೆ ದೊರೆಯುತ್ತಿರುವದು ಮಾಸಿಕ ರೂ ೧೭೫/-. ಅದರಿ ಜೀವನ ಖರ್ಚಿಗೂ ಸಂಬಳಕ್ಕೂ ಏನಾದರೂ ಸಂಬಂಧವಿದೆಯೇ? ಮನೆ ಬಾಡಿಗೆ, ತಿಂಗಳಿಗೆ ೪೦/- ಕೊಡಬೇಕು. ಪದವಿಪೂರ್ವದಲ್ಲಿ ಓದುತ್ತಿರುವ ಮಗನಿಗೆ ತಿಂಗಳಿಗೆ ರೂ ೯೦/- ಕಳುಹಿಸಬೇಕು, ಮಡಿಕೇರಿ ಕಾಲೇಜಿನಲ್ಲಿರುವ ಮಗಳಿಗೆ ತಿಂಗಳಿಗೆ ೪೫/- ದೊರೆಯುವ ೧೭೫/- ರೂ. ಗಳಲ್ಲಿ ಏನು ಮೂಹಲಾಗುತ್ತೆ? ಕುಟುಂಬದ ಜೀವನ ಹೇಳಿತೀರದು. ಸರಕಾರಿ ನೌಕರರ ಜೀವನ ಸಾಕು. ಈ ರೀತಿಯ ಅಲ್ಪ ಸಂಬಳ ಕೊಟ್ಟು ಸರಕಾರವೇ ಲಂಚ ತೆಗೆಯುವಂತೆ ನಮ್ಮನ್ನು ಮಾಡುತ್ತಿದೆ. ಲಂಚ ತೆಗೆಯದೆ ನಾವು ಬಾಳುವಂತಿಲ್ಲ. ಪರ್ಮಿಟು-ಒಂದು ದೊರೆತರೆ ಸಾವಿರಾರು ಸಂಪಾದಿಸುವ ವ್ಯಾಪಾರಸ್ಥರ ಪರ್ಮಿಟಿಗೆ ೧೦೦/- ರಂತೆ ನಮಗೆ ಕೊಟ್ಟರೆ ಅವರಿಗಾದ ಅನ್ಯಾಯವೇನು?"

ಸರಕಾರಿ ಉದ್ಯೋಗಿಗಳ ಕಷ್ಟ ಜೀವನವನ್ನು ನೆನಸಿ ನನಗೆ ಬೇಸರ ಬಂದಂತಾಯಿತು. ಬಹುಶಃ ಅಕ್ಕಿ, ಬಟ್ಟೆ ಮೊದಲಾದ ರಾರ್ಜನೆಗಳನ್ನು ಇಟ್ಟುಕೊಂಡು ಕೈಗಾರಿಕೆ ಮಾಡುತ್ತಿರುವವರೇ ಏರಿಕೆಯ ಬೆಲೆಗೆ ಕಾರಣರಿರಬೇಕೆಂದು ಗಿರಣಿ ಮಾಲೀಕರೊಬ್ಬರಲ್ಲಿಗೆ ಹೋಗಿ ನನ್ನ ಪರಿಸ್ಥಿತಿಯನ್ನು ವಿವರಿಸಿದೆನು. ಅವರು ಹೇಳತೊಡಗಿದರು. 'ವಸ್ತುಗಳ ಬೆಲೆ ಕಡಿಮೆಯಾಗಬೇಕೆಂದು ನಾನು ಒಪ್ಪುತ್ತೇನೆ. ಆದರೆ ಕಡಿಮೆ ದರದ ಬೆಲೆಯಲ್ಲಿ ನಮಗೆ ಕಚ್ಚಾನೂಲಸಿಗಳು ದೊರೆಯಬೇಕಲ್ಲ. ಕೆಲಸಗಾರರು ಕಡಿಮೆ ಸಂಬಳದಲ್ಲಿ ದೊರೆಯಬೇಕಲ್ಲ! ಲೇಬರ್ ಮುಂದಾಳುಗಳೆಂದು ಜನರು ಕೆಲಸಗಾರರಿಂದ ಇಲ್ಲದ ಸಲ್ಲದ ಬೇಡಿಕೆಗಳನ್ನು ಮುಂದಿರಿಸಿ, ಆಗಾಗ ಮುಷ್ಕರ ಮಾಡಿಸಿ ವಿಪರೀತ ನಷ್ಟ ಮಾಡುತ್ತಾರೆ. ಫಲಿತಾಂಶವಾಗಿ ಉತ್ಪಾದಿಸಿದ ವಸ್ತುಗಳ ಕ್ರಯ ಏರುತ್ತದೆ. ಇದರ ಮಧ್ಯೆ ಮಿಲ್ಲುಗಳಿಗೆ ಇನ್ಸ್‌ಪೆಕ್ಟರರು, ಕಂಟ್ರೋಲ್ ಅಧಿಕಾರಿಗಳು ನೂರಾರು? ಇವರನ್ನು ನೆನೆದಾಗ ನನಗೆ ಒಂದು ಕಥೆ ಯೋಚನೆಗೆ ಬರುತ್ತಿದೆ. ಹಾಲು ಮಾರುವವನೊಬ್ಬನು ನೀರು ಹಾಲು ಮಾರುವನೆಂದು ಅದನ್ನು ಪರಿಶೀಲಿಸಲು ಒಬ್ಬ ಅಧಿಕಾರಿಯನ್ನು ನೇಮಿಸಿದರಂತೆ. ಹಾಲಿನವನು ಅಧಿಕಾರಿಯ ಕೈಬಿಚ್ಚಿಗೆ ಮಾಡಿ ಅವರಿಗೆ ಕೊಟ್ಟ ಹಣ ಭರ್ತಿಮಾಡಲು ಸಾಕಷ್ಟು ನೀರು ಹಾಲಿಗೆ ಸೇರಿಸುತ್ತಿದ್ದನಂತೆ. ಅದರಂತೆ ಮಿಲ್ಲುಗಳ ಕಥೆಯೂಗಿದೆ. ಹೀಗೆಲ್ಲ ವಿಪರೀತ ಖರ್ಚಿದ್ದಾಗ ಬೆಲೆ ಕಡಿಮೆ ಮಾಡುವದು ಹೇಗೆ ಸಾಧ್ಯ?"

ಈ ಮಾತುಗಳನ್ನು ಕೇಳಿ ಕೆಲಸಗಾರರು ಹೆಚ್ಚು ಕೂಲಿ ಕೇಳುವ ಕಾರಣವೇ ವಸ್ತುಗಳ ಬೆಲೆ ಏರಲು ಕಾರಣವಿರಬಹುದೆಂದು ಮನದಲ್ಲಿ ಹೊಳೆದು ಆತನಲ್ಲಿಗೆ ಹೋಗಿ ಸರ್ವರ ಹಿತದೃಷ್ಟಿಯಿಂದ ನಿಷ್ಠ ದಿನ ಕೂಲಿಯನ್ನು ಕಡಿಮೆ ಮಾಡಿಕೊಳ್ಳಬೇಕೆಂದೆನು. ಮಜದೂರನು ಹೇಳತೊಡಗಿದನು. 'ಅಯ್ಯೋ, ನೀವು ನಮ್ಮನ್ನು ಕೇಳುವದೇ? ನಮಗೆ ದೊರೆಯುವ ಕೂಲಿ ಹೊಟ್ಟೆ ತುಂಬಲು ಸಾಲದು. ಆದಾಯ ಸಾಕಷ್ಟಿಲ್ಲವೆಂದೇ ಸಂಸಾರ ಕೂಡ ಹೂಡಲಾರೆವು. ಪ್ರತಿ ದಿನ ದುಡಿದೂ ದುಡಿದೂ ಸಾಕಾಗಿ ಹೋಗಿದೆ. ಒಂದು ದಿನ ಕೆಲಸ ಮಾಡದಿದ್ದರೆ ಉಪವಾಸ ಬೀಳಬೇಕಾಗುವದು. ನಾವು ವಾಸಿಸುವ ಮನೆ ಅಯ್ಯೋ, ಅದನ್ನು ಮನೆ ಎನ್ನಲಾಗುವದೇ? ನಮಗೆ ಕೊಡಲ್ಪಡುವ ರೇಶನಿನಿಂದ ಜೀವ ಹೋಗದೆ ಉಳಿಯುವದು ಕಷ್ಟ! ನಿಕ್ರಾಣನಾಗಿ ನಾನು ಕೆಲಸ ಮಾಡಲಾರೆ. ಅದಕ್ಕಾಗಿ ನನ್ನನ್ನು ದಕ್ಷ ಕೆಲಸಗಾರನೆಂದು ಯಾರೂ ಹೇಳಲ್ಲವೆನ್ನುತ್ತಾರೆ. ಒಮ್ಮೆ ಮಜೂರನೆಂದರೆ ತೀರಿತು. ಮುಂದಿನ ಸಾವಿರ ಸಂತಾನದವರೆಗೂ ಅವರು ಮಜದೂರರೆ! ವಿದ್ಯೆ, ಉತ್ತಮ ಬಟ್ಟೆ, ನಿವಾಸಸ್ಥಾನ, ಹೆಂಗಸು ಮಕ್ಕಳನ್ನು ಬಯಸುವದೇ ಅಪರಾಧದಂತಾಗಿದೆ! ದಿನಕ್ಕೆ ದೊರೆಯುವ ಒಂದೂವರೆ ರೂಪಾಯಿಯಲ್ಲಿ ನನ್ನ ಖರ್ಚನ್ನು ಸರಿಗಟ್ಟುವದೆಂತು? ನಾನು ದರಿದ್ರನಾಗಿ ಹುಟ್ಟಿದೆನೆ. ದರಿದ್ರನಾಗಿ ಬದುಕುತ್ತಿರುವೆನು. ದರಿದ್ರನಾಗಿಯೇ ಸಾಯುವೆನು.' ಮಜದೂರನ ಮಾತು ಕೇಳಿ ಕನಿಕರವಾಯಿತು. ಎಲ್ಲೆಡೆಯಲ್ಲಿ ಎಲ್ಲರೂ ಕಷ್ಟಪಡುವವರೆ. ಪ್ರತಿಯೊಬ್ಬನಿಗೂ ಆತನಿಗೆ ದೊರೆಯುತ್ತಿರುವದು ಆತನ ಖರ್ಚಿಗೆ ಸಾಲದು. ಹಾಗಿರುವಾಗ ಈ ಏರುತ್ತಿರುವ ಬೆಲೆಯ ಕಾರಣವೇನು? ಉತ್ಪಾದನೆಯ ಹಾಗೂ ವಿತರಣೆಯ ಬೆಲೆಗಳಲ್ಲಿನ ಅಂತರವು ಯಾರ ಕಿಸೆಗೆ ಹೋಗುತ್ತಿದೆ. ಎಲ್ಲ ಒಡೆಯುಲಾರದೆ ಒಗಟು. ಓದುತ್ತಿರುವ ನಿಮಗೇನಾದರು ಇದರ ಉತ್ತರ ಹೊಳೆಯುವದೇ?

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಅಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲಿಯೆ ಬೇಕಾದವರಿಗೆ ಕರೆಯುವ ಎನ್ನೆ. ಹಸು ಮತ್ತು ಉಳುಮೆ ಎತ್ತು ಮತ್ತು ಕೋಣಗಳನ್ನೂ ಬಿಡಿಸಿ ಕೊಡಲಾಗುವುದು. ಬೇಕಿರುವವರು ತಮಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂದೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

P. A. N. & SONS.
Commission Agent,
Gonicoppal
26-21 S. Coorg

SALE.

About six thousand the best variety of orange plants are for sale at the rate of Rs 30/- per hundred. Hight of the plants range between 2½ to 3½ feet. For further particulars, please write to the below address.

M. P. Appayya
Chinnalli Estate
Somwarpet Post
North Coorg

ಕೊ ಡ ಗು

ತಾ. ೨೯-೬-೧೯೫೧ನೇ ಶುಕ್ರವಾರ

"ಅಭಿಪ್ರಾಯ ಸ್ವಾತಂತ್ರ್ಯವು ನಮ್ಮ ಜನ್ಮಸಿದ್ಧ ಹಕ್ಕು ಅದು ರಾಜ್ಯಘಟನೆಯಿಂದ ಸಂಪೂರ್ಣ ಮನ್ನಣೆ ಪಡೆಯುವ ವರೆಗೆ ನಾವು ಮೌನ ತಳೆಯಲಾರೆವು."

ರಾಜ್ಯ ಘಟನೆಯ ೧೯ (೨) ನೇ ಕಲಮು.

ರಾಜ್ಯ ಘಟನೆಯಲ್ಲಿ ಇತ್ತೀಚೆಗೆ ಮಾಡಿದ ತಿದ್ದು ಪಡಿಗಳಲ್ಲಿ ಕೆಲವು ಅತ್ಯಾವಶ್ಯಕವಾದವುಗಳಾದರೂ ಸೆಕ್ಷನ್ ೧೯ (೨) ರಲ್ಲಿ ಮಾಡಿದ ತಿದ್ದು ಪಡಿಯು ಹಾನಿಕಾರಕವೆಂಬುದಾಗಿದೆ. ಈ ತಿದ್ದು ಪಡಿಯು ಪ್ರಕಾರ ಸರಕಾರವನ್ನು ಟೀಕೆ ಮಾಡುವ ಯಾವುದೇ ಪತ್ರಿಕೆಯು ಕತ್ತು ಹಿಸುಕಲ್ಪಡುವ ಸುಲಭವಾಗಿದೆ. ನಮ್ಮ ರಾಜ್ಯ ಘಟನೆಯಲ್ಲಿ ಪ್ರತಿಯೊಬ್ಬ ನಾಗರೀಕನಿಗೆ ವಾಕ್ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಕೊಡಲ್ಪಟ್ಟಿದೆ. ಆದರೆ ಈಗ ಜಾರಿಯಲ್ಲಿರುವ ತಿದ್ದು ಪಡಿಯ ಪ್ರಕಾರ ಪತ್ರಿಕೆಗಳ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಗದಾ ಪ್ರಹಾರವಾಗಿದೆ.

ಇಂಥಾ ತಿದ್ದು ಪಡಿಗಳನ್ನು ಜಾರಿಯಲ್ಲಿ ತರುವಾಗ ದೇಶೀಯರ ಅಭಿಮತ ತೆಗೆದು ಮಾಡಬೇಕಿತ್ತು. ಅದು ಸಾಧ್ಯವಿಲ್ಲದಿದ್ದರೆ ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತನ್ನಾದರೂ ಕೇಳಬೇಕಿತ್ತು. ಸರಕಾರವು ಇದಾವುದನ್ನೂ ಮಾಡದೆ ಅತಿ ತುರಿತದಿಂದ ನಿರಂಕುಶ ರೀತಿಯಲ್ಲಿ ಈ ತಿದ್ದು ಪಡಿಯನ್ನು ತಂದು ಪಾಸು ಮಾಡಿತು. ಆನಕ್ಕೆ ಪೈಸಿಡೆಂಟರೂ ತ್ವರಿತ ರೀತಿಯಿಂದಲೇ ಸಹಿಮಾಡಿದರು!

ಈ ತಿದ್ದು ಪಡಿಯು ಭಾರತ ಪತ್ರಿಕಾ ಸ್ವಾತಂತ್ರ್ಯದ ಬುಡಕ್ಕೇ ಕೊಡಲಿ ಹಾಕಿದೆ. ನಿರ್ಭೀತಿಯಿಂದ ತಮ್ಮ ಅಭಿಪ್ರಾಯವನ್ನು ಜನತೆಯ ಮುಂದಿಡಬಲ್ಲ ಪತ್ರಿಕೆಗಳೇ ನಾಡಿನ ಜನತೆಯನ್ನು ಮುನ್ನಡೆಸುವ, ಹಾಗೂ ಸರಕಾರವನ್ನು ಯೋಗ್ಯ ಪಥದಲ್ಲಿ ಸಾಗುವಂತೆ ನಿರ್ದೇಶಿಸುವ ಶಕ್ತಿಗಳು. ಪ್ರಜಾಪ್ರಭುತ್ವವು ಬೆಳೆದು ಬಾಳಲು ಈ ನಿರ್ಭೀತಿಯ ಪತ್ರಿಕೆಗಳೇ ಮೂಲ ಕಾರಣ. ಆಂಥಾ ಪತ್ರಿಕೆಗಳ ಗಂಟಲನ್ನು ಈ ತಿದ್ದು ಪಡಿಯು ಹಿಡಿದಿದೆ. ಅಭಿಪ್ರಾಯ ಸ್ವಾತಂತ್ರ್ಯವು ಹತ್ತಿಕ್ಕಲ್ಪಟ್ಟಿದೆ.

ಪಂಡಿತ ನೆಹರೂರವರು ಈ ತಿದ್ದುಪಡಿಯು ಪತ್ರಿಕೆಗಳ ಸ್ವಾತಂತ್ರ್ಯ ಹರಣಕ್ಕಾಗಿಯಲ್ಲ; ಮುಂದೆ ಬರಬಹುದಾದ ಅನಿಷ್ಟ ಪರಂಪರೆಯ ಕಾಲದ ಎಚ್ಚರಿಕೆಗಾಗಿ ಎಂದು ಹೇಳಿದರೂ ಅದು ಯಾರನ್ನೂ ತೃಪ್ತಿಪಡಿಸುವದಿಲ್ಲ. ಈ ತಿದ್ದುಪಡಿಯ ಸಹಾಯದಿಂದ ಸರಕಾರವನ್ನು ಟೀಕಿಸುವ ಯಾವದೇ ಪತ್ರಿಕೆಯ ಬಾಯಿಮುಚ್ಚಿಸುವದು ಸಾಧ್ಯವಿದೆ. ನೆಹರೂ ಸರಕಾರವು ಇಂಥಾ ಅಯೋಗ್ಯ ತಿದ್ದುಪಡಿಗೆ ಅವಕಾಶ ಕೊಡಬಾರದಿತ್ತು.

ಅಂದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದೇಶದ ಪತ್ರಿಕೆಗಳು ಕಾಂಗ್ರೆಸನ್ನು ಎತ್ತಿ ಹಿಡಿದು ಬ್ರಿಟಿಷರ ವಿರುದ್ಧ ದೇಶದ ಬಿಡುಗಡೆಗಾಗಿ ಅಪೂರ್ವ ತ್ಯಾಗಬುದ್ಧಿಯಿಂದ ಹೋರಾಡಿದವು ಕಾಂಗ್ರೆಸಿನ ಮುಖಪತ್ರಗಳಾಗಿ ಕಾಂಗ್ರೆಸಿನ ಸಂದೇಶವನ್ನು ನಾಲ್ದೆಸೆಗೂ ಹಬ್ಬಿಸಿ ಕಾಂಗ್ರೆಸನ್ನು ಅಧಿಕಾರಕ್ಕೆ ತಂದ ಜವಾಬ್ದಾರಿಯು ಅಖಿಲಭಾರತ ಪತ್ರಿಕೆಗಳಿಗೆ ಕೂಡಿದುದ್ದೆಂಬುದರಲ್ಲಿ ಸಂಶಯವಿಲ್ಲ. ಅಧಿಕಾರ ಪೀಠದೆಲ್ಲಿ ಕುಳಿತ ಕಾಂಗ್ರೆಸು, ಅಧಿಕಾರ ಮದದಿಂದ ತಪ್ಪು ಹೆಜ್ಜೆ ಇಡುತ್ತಿರುವಾಗ ಅದನ್ನು ಸರಿದಾರಿಗೆ ಬರುವಂತೆ ಎಚ್ಚರಿಸುತ್ತಿರುವ ಪತ್ರಿಕೆಗಳಿಗೆ ಗದಾಪ್ರಹಾರ ಮಾಡಲು ಹೊರಟಿರುವ ಈ ನೀತಿಯು ಖಂಡನೀಯವಾದುದು. ಮುಂಬರುವ ಚುನಾವಣೆಯ ಕಾಲದಲ್ಲಿ ತಮಗೆ ಅಪತ್ಯವಾಗಿ ತೋರುವ ಪತ್ರಿಕೆಗಳ ಬಾಯಿಮುಚ್ಚಿಸಲು ಈ ತಿದ್ದುಪಡಿಯೂ ಗಿದೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಕೆಲವು ಸದಸ್ಯರು ಹೇಳಿದ ಮಾತಿನಲ್ಲಿ ಸತ್ಯತೆ ಇಲ್ಲದಿಲ್ಲ. ಇಂಥಾ ಒಂದು ಸ್ವಾತಂತ್ರ್ಯಹರಣ ಕಾರ್ಯವು ಸರ್ವ ಎಡೆಗಳಿಂದ ಎದುರಿಸಲ್ಪಡಬೇಕು.

ಮೊನ್ನೆಯೂಗಿ ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನವು ಸರಕಾರದ ನೀತಿಯನ್ನು ಖಂಡಿಸಿ ನಿರ್ಣಯ ಮಾಡಿದೆ. ಸರಕಾರದ ನಿರಂಕುಶ ನೀತಿಯನ್ನು ವಿರೋಧಿಸಿ ತಮ್ಮ ಅತೃಪ್ತಿಯನ್ನೂ ನಿಶೇಧವನ್ನೂ ವ್ಯಕ್ತಮಾಡಲೋಸುಗ ತಾ. ೧೨-೬-೫೧ ರಲ್ಲಿ ದೇಶದಾದ್ಯಂತ ಎಲ್ಲಾ ಪತ್ರಿಕೆಗಳು ಪ್ರಕಟವಾಗದೆ ಹರತಾಳ ಆಚರಿಸುವವು. ಅದೇ ಅಲ್ಲ, ಈ ಕರಾಳಶಾಸನವನ್ನು ಹಿಂತೆಗೆಯುವ ವರೆಗೆ ಪತ್ರಿಕೆಗಳು ಸರಕಾರದೊಡನೆ ಈ ಹಿಂದಿನಂತೆ ಸಹಕರಿಸಲಾರವು. ದೇಶದ ಪ್ರತಿಯೊಬ್ಬ ಪ್ರಜೆಯೂ ಸರಕಾರದ ನೀತಿಯಿಂದ ದೇಶಕ್ಕೊದಗಿರುವ ಗಂಡಾಂತರವನ್ನು ಲಕ್ಷಿಸಿ ಅಖಿಲ ಭಾರತ ಪತ್ರಿಕಾ ಸಂಪಾದಕರ ನಿರ್ಣಯಕ್ಕೆ ಬೆಂಬಲವೀಯಬೇಕಾದುದು ಕರ್ತವ್ಯವಾಗಿದೆ.

ವರ್ತಮಾನ.

ಪ್ರಾಯಶ್ಚಿತ್ತಾರ್ಥವಾದ ಕಾರ್ಯಕ್ರಮಗಳಿಗೆ ಕೈಗಾರಿಕೆಯಲ್ಲಿ ತೊಡಗಿಕೊಂಡಿರುವ ಕೇಂದ್ರವು ಡೆಕ್ಕನ್ನಿನಲ್ಲಿ ವಿಫಲವಾಗಿದೆ ಆಂಧ್ರದವರು ಸದರಿ ಕೇಂದ್ರಕ್ಕೆ ಸೇರಲು ಇಚ್ಛಿಸುವುದಾದರೆ ಹೆಚ್ಚಿನ ವಿಷಯವನ್ನು ಮತ್ತು ಅದಕ್ಕೆ ಭೇಕಾದ ಅಪ್ಲಿಕೇಶನ್ ಫಾರಂಗಳನ್ನು ಮದಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಪಡೆದು ಕೊಳ್ಳಬಹುದು.

ಮದ್ರಾಸು ವಿಶ್ವವಿದ್ಯಾಲಯದ ಬಿ. ಟಿ ಪರೀಕ್ಷೆಯಲ್ಲಿ ಶ್ರೀಗಳಾದ ಐಚೆಟ್ಟಿರ ಮುತ್ತಣ್ಣ, ಮತ್ತು ಶ್ರೀಮತಿ ತೇಲಪಂಡ ಅಹಲ್ಯ ಇವರು ತೇರ್ಗಡೆಯಾಗಿರುವರು.

ತಾರೀಕು ೩೦-೬-೫೧ ರಲ್ಲಿ ಬೊಂಬಾಯಿಯಲ್ಲಿ ನಡೆಯುವ ಅಖಿಲ ಭಾರತ ಸಹಕಾರ ಯೂನಿಯನಿನ ಎಕ್ಸಿಕ್ಯೂಟಿವ್ ಕಮಿಟಿಗೆ ಆರ ಸದಸ್ಯರಾದ ಶ್ರೀ ಪಿ. ಐ. ಬೆಳ್ಯಪ್ಪನವರು ಹೋಗಿರುವರು.

ನಾಗಪುರ ವಿಶ್ವವಿದ್ಯಾಲಯದ ಬಿ. ಎ (ಆನರ್ಸ್) ಪರೀಕ್ಷೆಯಲ್ಲಿ ವಿದ್ವಾನ್ ಮೂಪಂಗಡ ಲಕ್ಕವ್ವ ಚಿಂಣಪ್ಪನವರು ಉತ್ತೀರ್ಣರಾಗಿರುವರು.

ರಜೆಯಲ್ಲಿರುವ ಶ್ರೀ. ಎನ್. ಮುದ್ದಪ್ಪನವರ ಬದಲು ಶ್ರೀ. ಐ. ಸಿ. ಸುಬ್ಬಯ್ಯನವರನ್ನು ಡಿಸ್ಟ್ರಿಕ್ಟ್ ಜಡ್ಜರಾಗಿಯೂ ಆವರ ಬದಲು ಶ್ರೀ. ಮೇರಿಯಂಡ ಮೂದಪ್ಪನವರನ್ನು ಉತ್ತರ ಕೊಡಗು ಮುನ್ಸೀಫರಾಗಿಯೂ ನೇಮಿಸಲಾಗಿದೆ.

ತಾರೀಕು ೨೯-೬-೫೧ ರಲ್ಲಿ ನಡೆಯುವದೆಂದು ನಿಶ್ಚಯಿಸಲ್ಪಟ್ಟಿದ್ದ ಕೊಡಗು ನ್ಯಾಯವಿಧಾಯಕ ಸಭೆಯ ವಿಷಯಗಳು ತಾ. ೭-೭-೫೧ ರಲ್ಲಿ ನಡೆಯುವದು.

ಕೊಡಗು ಚೀಫ್ ಫಾರೆಸ್ಟರಾಗಿರುವ ಶ್ರೀ. ಚನ್ನಿರ ಕಾಶಿಪ್ಪನವರು ತಾ. ೪-೭-೫೧ ರಲ್ಲಿ ನಿವೃತ್ತರಾಗುವರು. ಅವರ ಬದಲು ವಯನಾಡ್‌ನಿಂದ ಶ್ರೀ. ತ್ರಿಮೂರ್ತಿ ಎಂಬವರು ಬರುವರೆಂದು ವರ್ತಮಾನವಿದೆ.

ಧನುಗಾಲ ಗ್ರಾಮದಲ್ಲಿರುವ ಶ್ರೀ. ಚಾರಿಮಂಡ ಚಂಗಪ್ಪನವರಲ್ಲಿ ಈ ಕಳೆದ ನಾಲ್ಕು ತಿಂಗಳಿಂದ ಕಂದಪರ್ಣದ ಒಂದು ಎತ್ತು ಬಂದು ಸೇರಿಕೊಂಡಿದೆ. ಮಾಲೀಕರು ತಕ್ಕ ರುಜುವಾತಿನಿಂದ ಅದನ್ನು ಹೊಡೆದುಕೊಂಡು ಹೋಗಬಹುದಾಗಿ ತಿಳಿಸಲಾಗಿದೆ.

ಮದ್ರಾಸು ಟೆಕ್ನಿಕಲ್ ಕಾಲೇಜುಗಳಲ್ಲಿ ಕೊಡಗಿಗೆ ಇಟ್ಟಿರುವ ಸೀಟುಗಳನ್ನು ಈ ಕೆಳಗಿನವರಿಗೆ ಕೊಡಲು ಶಿಫಾರಸ್ಸು ಮಾಡಲಾಗಿದೆ. ಇಂಜಿನಿಯರಿಂಗ್ ಕಾಲೇಜಿನ ಎರಡು ಸೀಟನ್ನು ಶ್ರೀಗಳಾದ ಬೊಪ್ಪೇರಿಯಂಡ ಚೆಂಗಪ್ಪ ಮತ್ತು ಎಚ್. ಪಿ. ರಂಗರಾಜ ಇವರಿಗೆ ಮೆಡಿಕಲ್ ಕಾಲೇಜ್ ಎರಡು ಸೀಟನ್ನು ಶ್ರೀಮತಿ ಬಿದ್ದಂಡ ಮುತ್ತಮ್ಮ (ಇನ್ನೊಂದು ಸೀಟಿಗೆ ಯಾರಿಂದ ನಿರ್ಣಯವಾಗಿಲ್ಲ) ಎಗ್ರಿಕಲ್ಚರಲ್ ಕಾಲೇಜು ಎರಡು ಸೀಟನ್ನು ಶ್ರೀಗಳಾದ ಕೆ. ಎಂ ಬೋಜಪ್ಪ ಮತ್ತು ಪಿ. ಕೆ. ಬೆಳ್ಯಪ್ಪ ಇವರಿಗೆ ವೆಟರ್‌ನರಿ ಕಾಲೇಜಿನ ಒಂದು ಸೀಟು ಶ್ರೀ ಕೆ. ಎಸ್. ಸುಂದರ ಇವರಿಗೆ.

ಅಭಿಪ್ರಾಯ ಸ್ವಾತಂತ್ರ್ಯ ಪತ್ರಿಕೆಯ ಜನ್ಮಸಿದ್ಧ ಹಕ್ಕು.

ಅಖಿಲ ಭಾರತ ಪತ್ರಿಕಾ ಸಂಪಾದಕರ ವಿಶೇಷ ಅಧಿವೇಶನದಲ್ಲಿ ಗೊತ್ತುವಳಿಗಳ ಸ್ವೀಕಾರ.

ಭಾರತದ ಘಟನೆಯ ೧೯ (೨) ನೇ ಕಲಮಿಗೆ ತಿದ್ದುಪಡಿ ಮಾಡಿ, ಪತ್ರಿಕಾ ಸ್ವಾತಂತ್ರ್ಯದ ಮೇಲೆ ಗದೆ ಎತ್ತುವ ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಈ ಕ್ರಮದಿಂದುಂಟಾಗುವ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಅಖಿಲ ಭಾರತ ಪತ್ರಿಕಾ ಸಂಪಾದಕರ ವಿಶೇಷ ಅಧಿವೇಶನವನ್ನು ಬೊಂಬಾಯಿಯಲ್ಲಿ ಕರೆಯಲಾಗಿತ್ತು. ಅಲ್ಲಿ ಸ್ವೀಕಾರವಾದ ಠರಾವುಗಳಿವು.

(೧) ಈ ಅಧಿವೇಶನವು ಅ. ಭಾ. ಪ. ಸಂ. ಪರಿಷತ್ತಿನ ಅಧ್ಯಕ್ಷರು ಪಂಡಿತ ನೆಹರೂರ ಕಡೆಗೆ ಹೋದ ನಿಯೋಗಕ್ಕೂ ಮತ್ತು ಈ ಬಗ್ಗೆ ಸ್ಥಾಯೀ ಸಮಿತಿಯ ಗೊತ್ತುವಳಿಗೂ ತನ್ನ ಒಪ್ಪಿಗೆಯನ್ನು ಸೂಚಿಸುತ್ತಿದೆ. ಇದೂ ಅಲ್ಲದೆ, ಈ ಅಧಿವೇಶನವು ಎಲ್ಲಾ ಸಂಬಂಧಿತರಿಗೆ ಸ್ಪಷ್ಟಪಡಿಸುವುದೆಂದರೆ, ಪತ್ರಿಕಾ ಪ್ರಪಂಚವು ಸಾರ್ವಜನಿಕರ ಹಿತದೃಷ್ಟಿಯಿಂದ; ಇತ್ತೀಚೆಗೆ ಅವಸರವಾಗಿ ಮತ್ತು ಅವಿವೇಕತನದಿಂದ ಘಟನೆಯನ್ನು ತಿದ್ದುಪಡಿ ಮಾಡಿ ಕಾಯ್ದೆ ಮಾಡಿರುವುದನ್ನು ಹಿಂತೆಗೆದುಕೊಂಡು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಆಶ್ವಾಸನೆಕೊಡುವ ವರೆಗೆ ಸುಮ್ಮನೆ ಕೂಡಲಾರದು.

(೨) ನಾವು ಬೇಡುತ್ತಿರುವುದು ಒಂದು ವಿಶೇಷ ಹಕ್ಕಲ್ಲ ಆದರೆ ಅದು ತಮಗೆ ನೇರವಾಗಿ ಸಂಬಂಧಿಸಿದ್ದಿಂದೂ ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂಬಷನ್ನು ಸಾರ್ವಜನಿಕರ ವೇನ್ನಸ್ಸಿನ ಮೇಲೆ ಪರಿಣಾಮವಾಗುವಂತೆ ಮಾಡಲು ಈ ಅಧಿವೇಶನವು ಅಭಿಪ್ರಾಯ ತಳೆದಿದೆ. ಇತ್ತೀಚೆಗೆ ಪ್ರಸಿದ್ಧಪಡಿಸಲ್ಪಡುತ್ತಿರುವ ಪತ್ರಿಕೆಗಳಲ್ಲಿ, ತಮ್ಮ ಹೊಣೆಯನ್ನು ನಿರ್ವಹಿಸುವ ದೃಷ್ಟಿಯಿಂದ ತಮ್ಮ ಸಂಪಾದಕೀಯ ಲೇಖನದ ಮೇಲ್ಗಡೆ ಪ್ರಾಮುಖ್ಯವಾಗಿ ಕಾಣುವಂತೆ ನಿಶ್ಚಿತ ಘೋಷಣೆಯನ್ನು ಪ್ರಸಿದ್ಧಿಪಡಿಸಬೇಕು.

(೩) ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಯಾವುದೇ ರೀತಿಯಿಂದ ಗಂಡಾಂತರದ ವಿರೋಧಾರ್ಥವಾಗಿ ರಾಷ್ಟ್ರದ ಎಲ್ಲಾ ಪತ್ರಿಕೆಗಳೂ ೧೯ನೇ ಜುಲೈ ೧೯೫೧ರಂದು ಪತ್ರಿಕೆಯ ಮುದ್ರಣವನ್ನು ನಿಲ್ಲಿಸಬೇಕೆಂದೂ ಈ ವಿಶೇಷ ಅಧಿವೇಶನವು ಕೇಳಿಕೊಳ್ಳುತ್ತದೆ.

(೪) ಎಲ್ಲಾ ಮತದಾರರೂ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರಿಂದ, ೧೯ (೨) ನೇ ಕಲಮಿನ ತಿದ್ದುಪಡಿಯನ್ನು ಮಾಡಿಸಬೇಕೆಂದೂ ಅವರಿಂದ ವಾಗ್ದಾನಪಡೆಯಬೇಕಾಗಿ ಈ ಅಧಿವೇಶನವು ಮತದಾರರೆಲ್ಲರಿಗೂ ಒತ್ತಾಯಪಡಿಸುತ್ತದೆ.

(೫) ಈ ವಿಶೇಷ ಅಧಿವೇಶನವು ಘಟನೆಯ ತಿದ್ದುಪಡಿಯಲ್ಲಿ ಅಡಗಿರುವ ಅಭಿಪ್ರಾಯ ಸ್ವಾತಂತ್ರ್ಯದ ಕತ್ತು ಹಿಸುಕುವ ಕ್ರಮಕ್ಕೆ ಒಲವಾದ ವಿರೋಧವನ್ನುಂಟು ಮಾಡಬೇಕೆಂದು, ಎಲ್ಲಾ ಪತ್ರಿಕೆಗಳಿಗೂ ಮತ್ತು ಪತ್ರಿಕೆಯ ಹಿತವನ್ನು ಕಾಯಬೇಕೆನ್ನುವ ಎಲ್ಲಾ ಸಂಸ್ಥೆಗಳಿಗೂ ಆರಿಕೆ ಮಾಡಿಕೊಂಡಿದೆ.

(೬) ಪ್ರಾಂತ ಹಾಗೂ ಕೇಂದ್ರ ಸರಕಾರಗಳೊಡನೆ ಸಹಕಾರದಿಂದಾಗಲೀ ಇಲ್ಲವೆ ಸರ್ಕಾರವು ನೇಮಿಸಿದ ಸಲಹಾ ಸಮಿತಿಗಳಲ್ಲಾಗಲಿ ಕಾರ್ಯಮಾಡಬಾರದೆಂದು ಈ ವಿಶೇಷ ಅಧಿವೇಶನವು ನಿರ್ಧರಿಸಿದೆ. ಪುನರ್‌ವಿಮರ್ಶಿಸಬೇಕೆನ್ನುವ ಪರಿಸ್ಥಿತಿ ಉದ್ಭವಿಸಿದಲ್ಲಿ, ಈ ಗೊತ್ತುವಳಿಗಳ ಬೆಳಕಿನಲ್ಲಿ ಪುನರ್‌ವಿಮರ್ಶೆ ಮಾಡಲು ಈ ಅಧಿವೇಶನವು ಸ್ಥಾಯೀ ಸಮಿತಿಗೆ ಅಧಿಕಾರ ಕೊಡುತ್ತದೆ.

ಬೈರನಾಡು ಚೆಂಬಿಬೆಳಿಯೂರು ಹೆಚ್. ಇ. ಶಾಲಾ ಕಟ್ಟಡಕ್ಕೆ ಧನಸಹಾಯ ಮಾಡಿದ ಮಹನೀಯರ ಹೆಸರುಗಳು-

ಶ್ರೀಗಳಾದ		ರೂ.
1.	ಒಕ್ಕಲಿಗರ ಕುನ್ನಯ್ಯನವರು	100 0 0
2.	ಬ್ರಾಹ್ಮಣರ ಸಾವಿತ್ರಮ್ಮ	,, 100 0 0
3.	ಮೂಪಿಲ್ಲೆ ಮಹ್ಮದ್ ಮೆತ್ತು ಅಸು	,, 100 0 0
4.	ಮೆಸ್ಟಾಟರ್ ಗಣಪತಿ	,, 100 0 0
5.	ಚಾರಿಮಂಡ ಕೆ. ಅಪ್ಪಯ್ಯ	,, 100 0 0
6.	ಮೇಕೇರಿರ ಅಚ್ಚಯ್ಯ	,, 60 0 0
7.	ಪೈಕಾಡಿ ದೇವಣಗೇರಿ ಜಮಾಯತ ಮುಸಲ್ಮಾನರು	,, 60 0 0
8.	ಚಡಗರ ಪರಮೇಶ್ವರಯ್ಯ	,, 50 0 0
9.	ಆಮ್ಮಣಕುಟ್ಟಿಯಂಡ-ಗಣಪತಿ	,, 50 0 0
10.	ಚಡಗರ ಕೇಶವಯ್ಯ	,, 25 0 0
11.	ಜೈನರ ನಾಗಪ್ಪ	,, 20 0 0
	ಅಲ್ಲದೆ ಈ ಮೊದಲು ಸದರಿ ಶಾಲೆಗೆ ವಸೂಲಾದ ಮೊಬಲಗು	7,344 0 0
	ಅಂತು ಜುಮ್ಮ	8,109 0 0

FOR SALE.

A running concern known as the Popular Motor works, Mercara, dealing in motor parts and accessories. Tenders invited. Apply to:-

Mercara, 27—6—51. CHAIRMAN, The Coorg Transport Ltd.

ಓದುಗರ ಓಲೆಗಳು

ಕೋಮುವಾರು ವಿಷ.

ಸರಕಾರಿ ಉದ್ಯೋಗಗಳಿಗೆ ಅಥವಾ ಶಾಲಾ ಕಾಲೇಜುಗಳಿಗೆ ಆಯ್ಕೆಯ ಸಮಯದಲ್ಲಿ ಕೋಮುವಾರು ತತ್ವವನ್ನು ಅವಲಂಬಿಸಬಾರದು ಎಂಬುದನ್ನು ಪ್ರತಿಯೊಬ್ಬನೂ ಒಪ್ಪುವನು. ಭಾರತವನ್ನು ಜಾತ್ಯತೀತ ರಾಷ್ಟ್ರವೆಂದು ಸಾರಿರುವಾಗ ಜಾತಿವಂತ ಬೇಧವನ್ನು ಕಲ್ಪಿಸದೆ ಅಖಂಡ ಭಾರತದ ಸರ್ವಾಂಗೀಣ ಉನ್ನತಿಗೆ ದುಡಿಯ ಬೇಕಾದುದು ಕರ್ತವ್ಯ. ಆದ್ದರಿಂದಲೇ ಭಾರತ ಒಕ್ಕೂಟದ ಹಲವು ಸಂಸ್ಥಾನಗಳು ತಮ್ಮಲ್ಲಿದ್ದ ಕೋಮುವಾರು ತತ್ವ ಪ್ರಕಾರದ ಆಯ್ಕೆಯನ್ನ ರದ್ದುಗೊಡಿ ಯೋಗ್ಯತೆಯ ಅಳತೆಗೋಲಿನಿಂದ ಆಳೆಯುತ್ತಿರುವವು. ಆದರೆ ಮದ್ರಾಸಿನಂಥಾ ಕೋಮುವಾರು ವಿಷಸಿಂಚಿತ ಪ್ರಾಂತದಲ್ಲಿಯ ಮಂತ್ರಿಗಳ ಮೊಂಡತನ, ಹಿಂದುಳಿದವರಿಗೆ ಹಿತಬಗೆಯುವೆವೆನ್ನುವ ಸೋಗನ್ನು ಗಮನಿಸಿ ರಾಜ್ಯಘಟನೆಯಲ್ಲಿ ಹಿಂದುಳಿದವರಿಗೆಂದು ಶೇಕಡ ೬೦ ರಷ್ಟು ಸ್ಥಳಗಳನ್ನು ಕಾದಿರಿಸುವ ತಿದ್ದುಪಡಿಯಾಗಿದೆ. ಈ ರೀತಿ ತಿದ್ದುಪಡಿಯಾಗಿರುವದು ದಳಿತ ವರ್ಗದವರ ಹಿತದೃಷ್ಟಿಯಿಂದ ಆದರೂ ಆ ವರ್ಗದವರಿಗೆ ದೊರೆಯದು. ರಾಜ್ಯಘಟನೆಯಲ್ಲಿ ದಳಿತ ವರ್ಗದವರಿಗೂ ಕೂಡ ಮುಂಬರುವ ಹದಿನೈದು ವರ್ಷಗಳ ವರೆಗೆ ಮಾತ್ರ ಈ ರೀತಿ ಸ್ಥಳ ಕಾದಿರಿಸಲಾಗುವದೆಂದಿರುವಾಗ ಕ್ರಮಶಃ ಈ ಕಾಯ್ದಿದೆಯನ್ನು ತೆಗೆದು ಹಾಕಬೇಕೆಂಬುದೇ ಕೇಂದ್ರದ ಗುರಿಯೆಂಬುದನ್ನು ಎಲ್ಲರೂ ಒಪ್ಪುವರು. ಹೀಗಿರುವಾಗ ವಿವಿಧ ಪಂಗಡಗಳನ್ನು ದೇಶದಲ್ಲಿ ಹುಟ್ಟಿಸಿ ಅನೈಕ್ಯತೆಯನ್ನು ತರಬಹುದಾದ ಈ ನಿಯಮವನ್ನು ಜಾರಿಯಲ್ಲಿ ತಂದುದು ಕೊಡಗಿಗೆ ಅನ್ಯಾಯ ಮಾಡಿದಂತಾಗಿದೆ. ಇನ್ನಾದರೂ ಬರೇ ಯೋಗ್ಯತೆಯನ್ನೇ ಲಕ್ಷಿಸಿ ಆಯ್ಕೆಯಾಗಬೇಕಾಗಿದೆ. ಉವೇದಕವಾರರನ್ನು ಆರಿಸುವ ಸಮಿತಿಯವರು ಕಳೆದ ವರ್ಷ ಇದೇ ರೀತಿಯ ಅಭಿಪ್ರಾಯ ಪಟ್ಟಿದ್ದರಂತೆ. ಆದರೆ ಈ ವರ್ಷವೂ ಸಮಿತಿಯವರು ಈ ಹಾನಿಕಾರಕ ಕೋಮುವಾರು ಮಾರ್ಗವನ್ನೇ ಹಿಡಿದುದು ವಿಷಾದಕರ.

ನಂಜಪ್ಪ.

ಇವರು ಹಿಂದುಳಿದವರೇ?

ಮೊನ್ನೆಯಾಗಿ ವಿವಿಧ ಟೆಕ್ನಿಕಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸುವಾಗ ಲಿಂಗಾಯಿತರು ಹಿಂದುಳಿದ ಪಂಗಡದವರೆಂದು ಗಣಿಸಿ ಮೆಡಿಕಲ್ ಕಾಲೇಜಿನ ಒಂದು ಸೀಟನ್ನು ದ್ವಿತಿಯ ವರ್ಗದಲ್ಲಿ ಪಾಸಾದ ಉವೇದನಾವರರೊಬ್ಬರಿಗೆ ಕೊಡುವ ಸಿಫಾರಸ್ಸು ಮಾಡಿದ್ದಾರಂತೆ! ಹೇಶದ ವಿವಿಧ ಪಂಗಡಗಳನ್ನು ವರ್ಗೀಕರಿಸಿ ಇಂಥವರು ಹಿಂದುಳಿದವರೆಂದು ನಿಶ್ಚಯಿಸುವವರಾರು? ಯಾವ ಯಾವ ಆಧಾರದ ಮೇಲೆ ಒಂದು ಕೋಮನ್ನು ಹಿಂದುಳಿದವರೆಂದು ವರ್ಗೀಕರಿಸುವದು? ಕೊಡಗಿನಲ್ಲಿ ಮುಂಧುವರಿದ ಕೋಮುಗಳೆಂದರೆ ಬ್ರಾಹ್ಮಣ ಮತ್ತು ಕೊಡಗರು ಮಾತ್ರವೇ? ಲಿಂಗಾಯಿತರನ್ನು ಯಾವ ಕಾರಣಗಳಿಂದ ಹಿಂದುಳಿದವರೆಂದು ಪರಿಗಣಿಸಿರುವದು? ಸುಮಾರು ಮುನ್ನೂರು ವರ್ಷಗಳಿಗೂ ವಿೂರಿ ಕೊಡಗಿನ ರಾಜ್ಯಭಾರ ನಡೆಸಿದ ಲಿಂಗಾಯಿತರು ಹಿಂದುಳಿದವರೇ? ಇಂದೂ ಕೂಡ ಕೊಡಗಿನ ವಿವಿಧ ಭಾಗಗಳಲ್ಲಿ ಮಠಗಳನ್ನು ಇಟ್ಟುಕೊಂಡು ಅವುಗಳಿಗೆ ವಿಶಾಲ ರೀತಿಯ ಜಹಗೀರು ಜಮ್ಮಗಳನ್ನು ಪಡೆದು ವಿದ್ಯೆ ಸಂಪತ್ತುಗಳಿಂದ ಕೂಡಿರುವ ಸ್ವಯಂ ಪ್ರಭೆಯ ಬಸವಣ್ಣನವರ ಅನುಯಾಯಿಗಳು ಹಿಂದುಳಿದವರೇ? ಇವರನ್ನು ಹಿಂದುಳಿದವರೆಂದು ವರ್ಗೀಕರಿಸಿದ್ದು ಇತರ ಕೋಮುಗಳಿಗೆ ಅನ್ಯಾಯಮಾಡಿದಂತೆ. ಈ ವರ್ಗೀಕರಣವು ಶೀಘ್ರ ರದ್ದಾಗಬೇಕು.

ಬಿ. ಕುಶಾಲಪ್ಪ.

ಅನ್ಯಾಯ.

ಮೊನ್ನೆಯಾಗಿ ನಡೆದ ಮೆಡಿಕಲ್ ಕಾಲೇಜ್ ಸೀಟಿನ ಸಿಲೆಕ್ಷನಿನಲ್ಲಿ ದ್ವಿತಿಯ ಶ್ರೇಣಿಯು ತೇರ್ಗಡೆಯಾದವರೊಬ್ಬರನ್ನು ಆರಿಸುವ ಸಲಹೆಯಾಗಿದೆಯಂತೆ. ಅವರು ಹಿಂದುಳಿದ ಪಂಗಡದವರೆಂದು ಅವರಿಗೆ ಕೊಟ್ಟಿರುವದಾಗಿಯೂ ತಿಳಿದುಬಂತು. ನನಗೆ ತಿಳಿದಿರುವ ಮಟ್ಟಿಗೆ ಹಿಂದುಳಿದ ಪಂಗಡದವರಲ್ಲಿ ಇವರಿಗಿಂಥಲೂ ಹೆಚ್ಚು ಮಾರ್ಕ್ ಪಡೆದ ಇತರರು ಇದ್ದರು. ಪ್ರಥಮ ತರಗತಿಯಲ್ಲಿ ಪಾಸಾದವರಿಗೆ ಮಾತ್ರ ಈ ಸ್ಥಳಗಳನ್ನು ಕೊಡುವರೆಂಬ ಮಾತಿರುವ ಕಾರಣ ದ್ವಿತಿಯ ಶ್ರೇಣಿಯವರಾರೂ ತಮ್ಮ ಅರ್ಜಿಗಳನ್ನು ಹಾಕಿರಲಿಲ್ಲ. ಈಗ ಆರಿಸಲ್ಪಟ್ಟವರ ಹೆಸರೂ ಕೂಡ ಹಿಂದಿನಿಂದಿನಿಂದ ಸೇರಿಸಲ್ಪಟ್ಟದೆಂಬ ವರ್ತಮಾನವಿದೆ. ಆದ್ದರಿಂದ ಪ್ರಥಮ ತರಗತಿಯಲ್ಲಿ ಪಾಸಾದ ಹಿಂದುಳಿದ ಪಂಗಡದವರಿಲ್ಲದ್ದರಿಂದ ಹಿಂದುಳಿದವರಲ್ಲಿ ದ್ವಿತಿಯ ಶ್ರೇಣಿಯಲ್ಲಿ ಹೆಚ್ಚಿನ ಮಾರ್ಕ್ ಪಡೆದು ತೇರ್ಗಡೆಯಾದವರನ್ನು ಆರಿಸುವದು ಯೋಗ್ಯವಿತ್ತು. ಆದ್ದರಿಂದ ಈಗಿನ ಆಯ್ಕೆಯು ಸಮರ್ಪಕವಾಗಿಲ್ಲ. ಹಿಂದುಳಿದ ಪಂಗಡದಲ್ಲಿ ಓದಲು ಇಚ್ಛೆ ಇಶುವ ಎಲ್ಲಾ ವಿದ್ಯಾರ್ಥಿಗಳ ಅರ್ಜಿಗಳಿಗೆ ಅಪ್ಪದಕೊಟ್ಟು ಅವರಲ್ಲಿ ಯೋಗ್ಯರನ್ನು ಆರಿಸುವದು ಧರ್ಮವಾಗಿತ್ತು. ಹಾಗೆ ಮಾಡದ ಕಾರಣ ಇತರ ವಿದ್ಯಾರ್ಥಿಗಳಿಗೆ ಪೂರಾ ಅನ್ಯಾಯವಾಗಿದೆ.

ವಿದ್ಯಾರ್ಥಿ.

ಇದು ನ್ಯಾಯವೇ?

ಟೆಕ್ನಿಕಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸುವ ಸಮಿತಿಯವರು ಮೊನ್ನೆ ಇಂಜಿನಿಯರಿಂಗ್ ಕಾಲೇಜಿಗೆ ಕೊಡಗು ಸರಕಾರಿ ಕಾಲೇಜಿನವರಲ್ಲದ ವಿದ್ಯಾರ್ಥಿಯೊಬ್ಬರನ್ನು ಆರಿಸಿದ್ದಾರೆ. ಹೀಗೆ ಆರಿಸಿದ ದಕ್ಕೆ ನನ್ನ ಹಾಗೂ ದೇಶೀಯರ ವಿರೋಧವಿಲ್ಲ. ಏಕೆಂದರೆ ಯೋಗ್ಯತೆಗೆ ಎಲ್ಲೆಡೆಯಲ್ಲೂ ಗೌರವ ಕೊಡಲ್ಪಡಬೇಕು. ಆದರೆ ಸಿಲೆಕ್ಷನ್ ಸಮಿತಿಯವರು ಈ ತತ್ವವನ್ನು ಎಲ್ಲೆಡೆಯಲ್ಲೂ ಪರಿಪಾಲಿಸದೆ ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ' ಎಂಬಂತೆ ವರ್ತಿಸಿದ್ದಾರೆ. ಇಂಜಿನೀಯರಿಂಗ್ ಕಾಲೇಜಿನ ಸೀಟನ್ನು ಯೋಗ್ಯತೆ ನೋಡಿ ಹೊರಗಿನ ವಿದ್ಯಾರ್ಥಿಗೆ ಕೊಟ್ಟವರು ಎಗ್ರಿಕಲ್ಚರಲ್ ಕಾಲೇಜಿನ ಸೀಟನ್ನು ದೊರೆಯಬೇಕಾಗಿದ್ದ ವಿದ್ಯಾರ್ಥಿಗೆ ಕೊಡಬೆ ಅತನು ಹೊರಗಿನ ಕಾಲೇಜಿನವನೆಂಬ ಕಾರಣವನ್ನು ಕೊಟ್ಟು ಬೇರೊಬ್ಬರಿಗೆ ಕೊಟ್ಟರುವರಂತೆ! ಇದು ನಿಜವಾದರೆ ಸಮಿತಿಯು ನೀತಿಯು ಖಂಡನಾರ್ಹವಾದುದು. ನ್ಯಾಯರೀತಿ ವರ್ತಿಸಿದ್ದರೆ ಈ ಸೀಟೂ ಲಿಂಗಾಯಿತರಿಗೆ ಹೋಗುವಹೆಂಬ ಕಾರಣದಿಂದ ಕೋಮುವಾರು ತತ್ವವಾದಿಗಳು ಗೌಡ ಕೋಮಿನವರಿಗೂ ಒಂದು ಸೀಟು ದೊರೆಯಲೆಂದು ನ್ಯಾಯದ ಕೊಲೆ ಮಾಡಿರಬಹುದೇ?

ನಿರೀಕ್ಷಕ.

ಕೊಡಗಿನ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್, ಮತ್ತು ಸ್ಟಾಫ್ ಸಿಲೆಕ್ಷನ್ ಬೋರ್ಡ್.

ಉದ್ಯೋಗವಿಲ್ಲದವರಿಗೆ ಉದ್ಯೋಗವನ್ನು ನೌಕರರನ್ನು ಬೇಕಾದವರಿಗೆ ನೌಕರರನ್ನು ದೊರಕಿಸಿ ಕೊಡಲು "ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್" ಆಫೀಸೊಂದನ್ನು ಕೊಡಗಿನಲ್ಲಿ ಸ್ಥಾಪಿತವಾಗಿ ಈಗಾಗಲೇ ಎರಡು ಮೂರು ವರ್ಷಗಳಾಗಿರುವದು ಸಕಲರಿಗೂ ತಿಳಿದ ವಿಷಯ. ನಿರುದ್ಯೋಗದ ಪ್ರಶ್ನೆಯು ದಿನೇ ದಿನೇ ಹೆಚ್ಚಾಗುತ್ತಿರುವ ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಇಂತಹ ದೊಂದು ಇಲಾಖೆಯು ಎಷ್ಟು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ. ಉದ್ಯೋಗ ಅರ್ಥವಾ ನೌಕರಿ ಬೇಕಾದ ಪ್ರತಿಯೋರ್ವನೂ ಈ ಆಫೀಸಿನಲ್ಲಿ ತಮ್ಮ ಹೆಸರುಗಳನ್ನು "ರಿಜಿಸ್ಟರ್" ಮಾಡಿಸಿಕೊಂಡು, ಇದರ ಮೂಲಕವೇ ತಮ ತಮಗೆ ಯೋಗ್ಯವಾದ ಹುದ್ದೆಗಳನ್ನು ಪಡೆಯಬೇಕಾಗಿದೆ.

ಆದರೆ ಇತ್ತೀಚೆಗೆ ಈ ಆಫೀಸಿನಿಂದ ಹೆಚ್ಚಿನ ಪ್ರಯೋಜನವು ಸಕಲರಿಗೂ ದೊರಕುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. "ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್" ಲ್ಲಿ ಹೆಸರು "ರಿಜಿಸ್ಟರ್" ಮಾಡಿಸಿದರೂ, ಆ ರೀತಿ "ರಿಜಿಸ್ಟರ್" ಮಾಡಿಸಿದವರ ಪೈಕಿ ಯೋಗ್ಯರಾದವರನ್ನು ಹೆಕ್ಕಿ ಅವರನ್ನ ಉದ್ಯೋಗಕ್ಕೆ ನೇಮಿಸುವ ಹಕ್ಕನ್ನು "ಎಂಪ್ಲಾಯಿಮೆಂಟ್ ಆಫೀಸರ್"ರವರು ಪಡೆದಿರುವುದಿಲ್ಲ. ಫಲವಾಗಿ, ಆ ಆಯ್ಕೆಯನ್ನು ಮಾಡುವ ಮತ್ತು ಉದ್ಯೋಗಕ್ಕೆ ನೇಮಿಸುವ ಅಧಿಕಾರವನ್ನು ಪಡೆದ ಅಧಿಕಾರಿಗಳು ನ್ಯಾಯ ಸಮ್ಮತವಾದ ರೀತಿಯಲ್ಲಿ ಮತ್ತು ನಿಷ್ಕೃಷ್ಟತೆಯಿಂದ ವರ್ತಿಸುತ್ತಿಲ್ಲವೆಂದು ಹಲವಾರು ಕಡೆಗಳಿಂದ ಮಾತುಗಳು ಕೇಳಿಬರುತ್ತಿವೆ.

ಕೊಡಗಿನ "ಸ್ಟಾಫ್ ಸೆಲೆಕ್ಷನ್ ಬೋರ್ಡ್" ಸರಕಾರಿ ಉದ್ಯೋಗಗಳಿಗೆ ಜನರನ್ನು ಚನಾಯಿಸುವ ಸಂಸ್ಥೆ. ಈ ಸಂಸ್ಥೆಯಲ್ಲಿ "ಸೆಲೆಕ್ಟ್" ಆಗದ, ಅದರಲ್ಲೂ ಈ ಸಂಸ್ಥೆಯ ಚನಾವಣಾ ಪರೀಕ್ಷೆಗೂ ಸಹ ಹಾಜರಾಗದವರಿಗೆ ಕೆಲಸ ದೊರೆತಿರುವ ದಂತೆ! ಇದು ನಿಜವಾದರೆ ಎಂತಹ ಅನ್ಯಾಯ?

ಇನ್ನು ಮುಂದಾದರೂ ಇಂಥಾ ಅನ್ಯಾಯವನ್ನು ಮತ್ತು ಮೋಸಗಳನ್ನು ಮಾಡದೆ, ನ್ಯಾಯ ಮಾರ್ಗವನ್ನನುಸರಿಸಿ, ದೇಶದ ಸಕಲ ಪ್ರಜೆಗಳ ಹಿತವನ್ನು ಬಯಸಬೇಕಾಗಿ ಈ ಮೂಲಕ ಪ್ರಾರ್ಥಿಸಿಕೊಳ್ಳಲಾಗಿದೆ.

"ತಿಮ್ಮ"

ನಿರೀಕ್ಷಿಸಬಹುದೇ?

ಕಳೆದವಾರ 'G' ಎಂಬ ಹೆಸರಿನಲ್ಲಿ 'ನಮ್ಮ ಪ್ರಿನ್ಸಿಪಾಲ್'ರಿಗೆ ಮಾಡಿದ ಪ್ರಶಂಸೆಯನ್ನೂ, ಅವರು ಮದ್ರಾಸಿಗೆ ಹೋಗಲಿರುವ ವಿಷಯವನ್ನೂ ಕುರಿತು ಬರೆದ ಲೇಖನವನ್ನು ಆದ್ಯಂತ ಓದಿಕೊಂಡೆನು. ಓದಿ ಬಹು ವ್ಯಸನವಾಯಿತು ನನಗೆ. ಏಕೆಂದರೆ ನಾನೊಬ್ಬ ಕಾಲೇಜ್ ವಿದ್ಯಾರ್ಥಿ. 'ನಮ್ಮ ಪ್ರಿನ್ಸಿಪಾಲ್'ರು ಎಷ್ಟು ದಕ್ಷರು, ಎಷ್ಟು ಸಮರ್ಥರು ಎಂಬುದು ಇವನಿಗೆ ಗೊತ್ತು. ನಮ್ಮ ದುರಾದೃಷ್ಟ ವಶಾತ್ ಆ ಪಕ್ಷು ಹೊರಟೇ ಹೋಗುವುದಾದರೆ ನಮಗೆ ಅಪಾರ ನಷ್ಟವಾಗುವದು ಖಂಡಿತ. ನಷ್ಟ ಕಾಲೇಜಿಗೇ ಮಾತ್ರವಲ್ಲ, ಇಡೀ ಕೊಡಗಿಗೆ ಎಂದರೆ ಅತಿಶಯೋಕ್ತಿಯಲ್ಲ. ಆ ನಷ್ಟವನ್ನು ಭರ್ತಿಮಾಡುವುದು ಅಸಾಧ್ಯವಾದ ಕೆಲಸ.

ಈಗಾಗಲೇ ವೈಸ್ ಪ್ರಿನ್ಸಿಪಾಲರಿಗೆ, ಅವರ ಸರ್ವೀಸು ಅನಿವಾರ್ಯವೆಂದು ಕೊಟ್ಟ ನೋಟೀಸನ್ನು ಸರ್ಕಾರವೇ ವಾಪಾಸು ತೆಗೆದುಕೊಂಡಿದೆ. ಇದು ಬಹು ಸಂತಸದ ಸಂಗತಿ. ಆದೇ ವೇಳೆಗೆ 'ನಮ್ಮ ಪ್ರಿನ್ಸಿಪಾಲರು' ಕಾಲೇಜು ಬಿಟ್ಟು ಹೋಗುತ್ತಾರೆಂಬುದು ಬಹು ದುಃಖಕರವಾದ ಮಾತ್ರ. ನಮ್ಮ ಕಾಲೇಜಿನ ಆಧಾರಸ್ತಂಭದಂತಿರುವ ಅವರು ಹೋಗಬಾರದು; ಹೋಗಲು ನಾವು ಬಿಡಲೂ ಬಾರದು.

ನಮ್ಮ ಪ್ರಿನ್ಸಿಪಾಲರಾದ ವಿ. ಹೋಲ್ ಮೆನ್‌ರವರು, ನಮ್ಮೆಲ್ಲರ ಏಳಿಗೆಗಾಗಿ ಇಲ್ಲೇ ನಿಲ್ಲುವ ದೊಡ್ಡ ಮನಸ್ಸು ಮಾಡುವರೆಂದು ನಿರೀಕ್ಷಿಸಬಹುದೇ?

'ಕಾಲೇಜ್ ವಿದ್ಯಾರ್ಥಿ'

ಮೃಗೀಯತೆ.

ಮನುಷ್ಯನು ನಾಗರೀಕನೆಂದುಕೊಂಡರೂ ಆತನಲ್ಲಿ ವ್ಯಗ್ರ ಬುದ್ಧಿ ಇನ್ನೂ ಇದೆ. ಅತೀ ಭಯಂಕರ ಹಿಂಸಕ ಪ್ರಾಣಿಗಳಿಗಿಂಥಲೂ ಹೇಯ ಕೃತ್ಯವನ್ನು ಆತನು ಮಾಡುವನು. ಉದಾಹರಣೆಗೆ ಹೇಳುವ ದಾದರೆ ಮಡಿಕೇರಿ ಪುರಸಭೆಯು ಆಮಾನುಷ ಕಾರ್ಯವನ್ನು ಎತ್ತಿ ಹೇಳಬಹುದು. ನಿನ್ನೆ ಮೊನ್ನೆಯಿಂದ ಪೇಟೆಯ ಹಾದಿ ಬೀದಿಯಲ್ಲಿರುವ ನಾಯಿ, ಆಡು, ಹಂದಿಗಳಿಗೆಲ್ಲ ಪುರಸಭೆಯವರು ಗುಂಡು ಹಾಕುತ್ತಿರುವರು ನಿನ್ನೆ (ತಾ ೨೬) ಸಾಯಂಕಾಲ ಬಸ್ ಸ್ಟೇಂಡ್ ಬಳಿ ನಾನು ನಿಂತಿದ್ದೆ. ಒಂದು ಆಡು ಹತ್ತಿರದಲ್ಲಿ ಮೇಯುತ್ತಿತ್ತು. ಅದಕ್ಕೆ ಗುಂಡು ಹಾಕಲಾಯಿತು. ಗುಂಡುತಾಗಿದ ಆಡು ಬೀಳಲಿಲ್ಲ. ಬದಲು ಸ್ವಲ್ಪ ದೂರ ಓಡಿತು. ಮಲಮೂತ್ರಗಳು ಹೊರಬಿದ್ದುವು. ಅದರ ಕಣ್ಣಿನಲ್ಲಿ ನೀ

ರು ಸೀಮೆಂಟು ರಸ್ತೆಗೆ ತೊಟ್ಟಕ್ಕಿತು. ಪುನಹ ಮತ್ತೊಂದು ಗುಂಡು ಬಿತ್ತು. ಆಡು ಕೆಳಗೆ ಬಿದ್ದಿತು. ಅಯ್ಯೋ ಗರ್ಭಿಣಿ ಆಡು! ಎಂಥಾ ಅನಾಚಾರವಿದು! ಈ ರೀತಿ ಮೂಕ ಪ್ರಾಣಿಗಳ ಬಲಿ ತೆಗೆಯುವದು ಯಾವ ಧರ್ಮ? ಪುರಸಭೆಯವರ ನಿಯಮದಂತೆ ನಾಕದೆ ನಾಯಿ,ಹಂದಿ,ಆಡುಗಳನ್ನು ರಸ್ತೆಗೆ ಬಿಡುವವರಿಗೆ ಶಿಕ್ಷೆ ವಿಧಿಸಲ್ಪಡಲಿ. ಅಂಥಾವರನ್ನು ಬೇಕಾಹಾರೆ ಹಿಡಿದು ಜೈಲಿಗೆ ಸೇರಿಸಲಿ. ಅದಕ್ಕೆ ಅವರ ತಪ್ಪಿಗಾಗಿ ಈ ಮೂಕಪ್ರಾಣಿಗಳ ಜೀವ ಹಾನಿ ಮಾಡುವದೇ? ನಾಯಿಗಳಿಗೆ ಹುಚ್ಚು ಹಿಡಿದು ಮನುಷ್ಯನಿಗೆ ಘೋರಕವಾಗಬಹುದು. ಹಂದಿಗಳು ರಸ್ತೆಗಳನ್ನು ಉತ್ತು ನಷ್ಟ ಮಾಡಬಹುದು. ಬಡ ಆಡುಗಳು ಯಾವ ಅಹಿತ ಮಾಡುವವು? ಮಡಿಕೇರಿ ಮಹದೇವಪೇಟೆ ರಸ್ತೆಯಲ್ಲಿ ನೂರಾರು ಸಂಖ್ಯೆಯಿಂದ ನಿಂತಿರುವ ದನಗಳನ್ನು ಹಾಗಾದರೆ ಮುನಿಸಿಪಾಲಿಟಿಯವರು ಏಕೆ ಗುಂಡುಹೊಡೆಯುವದಿಲ್ಲ? ಅಲ್ಲಲ್ಲಿ ಹೆಚ್ಚು ಹುಚ್ಚು ತಿರುಗುತ್ತಿರುವ ಕತ್ತೆ, ಕುದುರೆಗಳಿಗೆ ಗುಂಡೇಕೆ ಹಾಕಲಾರರು? ಮುನ್ಸಿಪಾಲಿಟಿಯವರು ಸ್ವಲ್ಪ ಆಲೋಚಿಸಬೇಕು. ಈ ಪ್ರಾಣಿಗಳನ್ನು ಸಾಕುವವರು ಅವನ್ನು ಸಾರ್ವಜನಿಕ ತೊಂದರೆಗೆಡೆಯೊಗುವಂತೆ ಬಿಡದಂತೆ ಖಡ್ಡಾಯ ಶಿಕ್ಷೆ ವಿಧಿಸಬೇಕೇ ವಿನಾ ಮೂಕ ಬಡ ಪ್ರಾಣಿಗಳನ್ನು ಕೊಂದಿಕ್ಕುವದಲ್ಲ. ಪುರಸಭೆಯ ಅಧಿಕಾರಿಗಳು ಇತ್ತ ಇನ್ನಾದರೂ ಗಮನಿಸುವರೇ?

"ಭೂತದಯಾಪರ"

"ನಮ್ಮ ಭಾಗಮಂಡ್ಲದ ವೈಶಿಷ್ಟ್ಯ."

ಕೊಡಗಿನ ಇತರ ಯಾವ ಬೇರೆ ಸ್ಥಳದಲ್ಲಿ ಎಲ್ಲಿಯೂ ಇಲ್ಲದ ಆಹಾರದ ಕೊರತೆ, ಆರ್ಥಿಕ ಉಲ್ಬಣ, ಆರಿವೆಗಳ ತುಟ್ಟಿಯನ್ನು ಕಾಣಬಹುದಾದ ಸ್ಥಳವೆಂದರೆ 'ನಮ್ಮ ಭಾಗಮಂಡ್ಲ'ದಲ್ಲಿ. ಸಾಡೇ ತೀನ್ ಆಂಗಡಿಗಳಿಂದ ಅಲ್ಪ ಜನ ಸಂಖ್ಯೆಯಿಂದಿರುವ ನಮ್ಮ ಭಾಗಮಂಡ್ಲವು ಕರಾಳಸಂತೆಯ ತಪರೂರಾಗಿದೆ.

ದೈನಿಕ ಜೀವನಕ್ಕೆ ಅವಶ್ಯವಾಗಿರುವ ಸಾಮಗ್ರಿಗಳಿಗೆ ವಿಪರೀತ ಬೆಲೆ. ಬಟ್ಟೆಯು ಬೆಲೆಯಂತೂ ಪರಮಾವಧಿಗೇರಿದೆ. ಬೇರೆ ಯಾವ ಸ್ಥಳಗಳಿಗಿಂತಲೂ ಕ್ರಯದಲ್ಲಿ ಅಧಿಕವಲ್ಲದೆ, ಕಡಿಮೆ ಇಲ್ಲ ಅದು ಹಾಗಿರಲಿ; ಅಪರೂಪವಾಗಿ ಬರುತ್ತಿರುವ ಮಿಲ್ಲ್ ಬಟ್ಟೆಗಳು ಸದಾ ಅದೃಶ್ಯವಾಗಿಯೇ ಕಂಡುಬರುತ್ತಿದೆ. ಅಲ್ಲೋ, ಇಲ್ಲೋ, ಅಲ್ಪ ಸ್ವಲ್ಪ ಗೋಚರಿಸಿದ ಅರಿವೆಗಳ ಮೇಲೆ ಕಂಟ್ರೋಲ್ ಕ್ರಯ ಪಟ್ಟಿಯು ಅಗೋಚರವಾಗಿಯೇ ಇರುವುದು. ಬಟ್ಟೆ ಬಂದ ಮರುದಿನ ಆಂಗಡಿಯಲ್ಲಿ ಬಟ್ಟೆಗಳೇ ಇರುವುದಿಲ್ಲ. ಒಂದೆರಡು 'ಹಲ್ಕ' ಬಟ್ಟೆಗಳ ತಾನು ಮಾತ್ರ ಬಹಿರಂಗ ಆಸ್ಥಾನವನ್ನು ಪಡೆದಿರುತ್ತವೆ. ಅವುಗಳನ್ನು ಕೊಳ್ಳುವವರಿಲ್ಲದ್ದರಿಂದ ಬೇಗನೆ ಖರ್ಚಿಯಾಗುವುದಕ್ಕೋಸ್ಕರ ಅದಕ್ಕೆ ಆ ಸ್ಥಳ. ಉತ್ತಮ ಬಟ್ಟೆಗಳಿಗೆ ಮಾತ್ರ ಆಂಗಡಿಯ ಒಳಗಿನ ಕತ್ತಲೆ ಕೋಣೆ. ಏಕೆಂದರೆ ಆ ವಸ್ತುಗಳನ್ನು ನಮ್ಮ ಸಾಹುಕಾರರು ಸಹ. ಬಿ. ಯಂ. ನಲ್ಲಿ ಬೇರೆ ಸ್ಥಳದಿಂದ ನಮಗಾಗಿ ಬಹು ಪ್ರಯಾಸದಿಂದ ಒಂದೆಕ್ಕರಡರ ಪೀಟಿನಲ್ಲಿ ತಂದದ್ದಾಗಿ ಕೃತಜ್ಞತೆಯಿಂದ ಹೇಳುವರು. ಇದು ನಿಜವಲ್ಲದಿದ್ದರೆ ಇದು ಕಪ್ಪುಸಂತೆಯ ಮತ್ತೊಂದು ನೂತನ ಸಂಶೋಧನೆಯೆಂದು ಧಾರಾಳವಾಗಿ ಹೇಳಬಹುದಲ್ಲವೆ?

ಭಾಗಮಂಡ್ಲದ ನಿರಾಕಿಗಳನ್ನು ತೃಪ್ತಿಪಡಿಸುವುದೇ ಕಷ್ಟಕ್ಕೆ ಬಂದಿರುವಾಗ ನಮ್ಮ ಸಾಹುಕಾರರು ೧೪ ಮೈಲು ದೂರದಲ್ಲಿರುವ ಕಠಿಕೆಗೆ ತಲೆಹೊರೆಯಿಂದ ಹೊತ್ತುಕೊಂಡು ಹೋಗಿ ಅಲ್ಲಿಯ ಬಡ ಕಾರ್ಮಿಕರಿಗೆ (ಜನತೆಗೆ) ಬಟ್ಟೆಯ ಸರಬರಾಯಿಯನ್ನು ಮಾಡುವ ದೇಶಸೇವಾ ಕಾರ್ಯದಲ್ಲಿಯೂ ನಿರತರಾಗಿರುತ್ತಾರೆ. ಅದರೆ ಅವರು ಹೇಳಿದ್ದೆ ಬೆಲೆ. ಹಾಗಾದಲೆ ಇದು ಬಿ ಯಂ. ನ ನವೀನ ಶೋಧನೆಯಲ್ಲವೆ?

ನಮ್ಮಲ್ಲಿಯ ಶ್ರೀಮಂತರು ಸಹ ಕರಾಳ ಸಂತೆಯ ಆರಾಧಕರೆಂದು ಇತ್ತೀಚೆಗೆ ಗೊತ್ತಾಯಿತು. ಅವರು ಸರಕಾರ ದೊಡನೆ ಸಹಕರಿಸುತ್ತಾ, ಕಷ್ಟಕಾಲದಲ್ಲಿ ಬಡವರಿಗೆ ನೆರವನ್ನೀಯುತ್ತಾ ತಮ್ಮ ಆರಾಧನೆಯಲ್ಲಿ ಅನುರಕ್ತರಾಗಿರುವರು. ಏಲಕ್ಕಿ ಮಲೆಯ ಪ್ರಯುಕ್ತ ಅಕ್ಕಿ ಪರ್ಮಿಟ್ ತೆಗೆದು ಉಳುವ ರಿಬತ್ತವಿಲ್ಲೆಂದು ಸರಕಾರಕ್ಕೆ ಗೊತ್ತು ಪಡಿಸಿದರು. ಪರ್ಮಿಟ್ ದಾರರಲ್ಲಿ ಮೊನ್ನೆ ರೇಷನ್ ಅಧಿಕಾರಿಗಳು ಚೆಕ್ಕ್ ಮಾಡಲಾಗಿ ಒಬ್ಬೊಬ್ಬರಲ್ಲಿ ಐದಾರು ಗಾಡಿ ಬತ್ತ ಕಂಡುಬಂದಿತು. ಈ ಬತ್ತವನ್ನು ಕಷ್ಟಕಾಲದಲ್ಲಿ ಅಲ್ಲಿಯ ಬಡವರು ಬಂದು ಕೇಳಿದಾಗ ಸಹಾಯ ಮಾಡುವುದಕ್ಕೆಂದು ಯಾರೋ ಹೇಳಿದರು. ಆದರೆ ಧಾರಣೆ ಮಾತ್ರ ಕಂಟ್ರೋಲ್ ರೇಟಿಗಿಂತ ಎರಡು ಮೂರು ಪಟ್ಟು ಅಧಿಕವಂತೆ! ಇದು ನಮ್ಮ ಶ್ರೀಮಂತರು ಕಂಡು ಹಿಡಿದ ಬಿ.ಯಂ' ನ ಹೊಸ ಶೋಧನೆಯಲ್ಲವೆ? ಪ್ರತಿ ದಿನವೂ ಮುಂಡ್ರೋಟಿಗೆ ಇಲ್ಲಿಂದ ಅಕ್ಕಿ ಸಾಗುತ್ತಲಿದೆ. ಪೋಲೀಸ್ ನವರು ೨೪ ಗಂಟೆಗಳ ಕಾಲ ಎಡೆಬಿಡದೆ ಕಾಯುತ್ತಿದ್ದಾರೆ! ಆದರೂ ಪ್ರಯೋಜನವಾಗಿಲ್ಲ. ಇದನ್ನು ಯಾವ ರೀತಿಯ ಸಂಶೋಧನೆ ಎಂದು ಕರೆಯೋಣ?

'ನಾಡಿಗ'

ಪ್ರಕಟಣೆ.

ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ 1951-52 ನೇ ಇಸವಿಯಲ್ಲಿ ಕೈಕೊಳ್ಳುವ ಕೆಲಸಗಳನ್ನು ಸರ್ವರ ತಿಳುವಳಿಕೆಗಾಗಿ ಈ ಕೆಳಗೆ ಕೊಡಲಾಗಿದೆ

1. ನೀರಾವರಿ ಯೋಜನೆ (ಸ್ವಂತ ಕೆಲಸಗಳು.)

(a) ಕೆರೆಗಳು:–ಈ ವರ್ಷ ಕೊಡಗಿನಲ್ಲಿ ಹೆಚ್ಚಿನ ಕಡಿಮೆ 120 ಕೆರೆಗಳನ್ನು ತೋಡಿಸುವುದಾಗಲೀ ಯಾ ರಿಪೇರಿ ಮಾಡುವುದಾಗಲೀ ಕೈಕೊಂಡು ಬೆಳೆಗಳಿಗೆ ನೀರು ಸರಬರಾಯಿ ಮಾಡುವ ಏರ್ಪಾಡು ಮಾಡುವುದು.

(b) ಕಟ್ಟೆ ವತ್ತು ತೋಡುಗಳು:–ಇದೇ ವರ್ಷ ಹೆಚ್ಚು ಕಡಿಮೆ 50 ತೋಡುಗಳು ಯಾ ಕಟ್ಟೆಗಳನ್ನು ಕಟ್ಟಿ ವ್ಯವಸಾಯಕ್ಕೆ ನೀರಿನ ಅನುಕೂಲತೆ ಮಾಡುವುದು.

ಈ ಮೇಲಿನ ಕೆಲಸಗಳನ್ನು ರೈತರೇ ಕೈಗೊಳ್ಳಬೇಕು. ಮತ್ತು ಇಂಥಾ ಕೆಲಸಗಳನ್ನು ಕೈಕೊಂಡು ಇದೇ ವರ್ಷ ಮುಗಿಸುವ ನಂಬಿಕೆಯಿರುವ ರೈತರು ಈ ವರೆಗೆ ಅರ್ಜಿ ಹಾಕದಿದ್ದ ಪಕ್ಷದಲ್ಲಿ ಒಡನೆ ಕೊಡಗು ವ್ಯವಸಾಯ ಇಲಾಖಾ ಅಧಿಕಾರಿಯವರಿಗೆ ಅರ್ಜಿ ಹಾಕತಕ್ಕದ್ದು ಇಂಥಾ ಕೆಲಸಗಳನ್ನು ತಾ. 31-12-1951 ಒಳಗೆ ಸಂಪೂರ್ಣ ಪೂರ್ತಿ ಮಾಡಿದರೆ ಸರಕಾರದ ಲೆಕ್ಕಚಾರದ ಮೇರೆ ಅಂಥಾ ಕೆಲಸಗಳ ಹೆಚ್ಚು ಕಡಿಮೆ ಅರ್ಧ ಖರ್ಚನ್ನು ರೈತರಿಗೆ ಕೊಡಲಾಗುತ್ತೆ.

2. ಗೊಬ್ಬರ ಮುಂತಾದುವುಗಳ ಬಟವಾಡೆ.

(a) ಗ್ರಾಮದ ಕಂಪೋಸ್ಟು ಯೋಜನೆ–ಮೊಹಲಿನ ವರ್ಷಗಳಲ್ಲಿ ಹಾಗೆಯೇ ಈ ವರ್ಷವೂ ಸಹ ಗ್ರಾಮದ ಕಂಪೋಸ್ಟು ಯೋಜನೆಯನ್ನು ಜಾರಿಗೆ ತರಲಾಗುತ್ತದೆ ಮತ್ತು ವ್ಯವಸಾಯ ಇಲಾಖೆಯ ಸಲಕರಣೆ ಮೇರೆ ಶಾಸ್ತ್ರೀಯ ರೀತಿಯಲ್ಲಿ ಹೆಚ್ಚು ಕಂಪೋಸ್ಟು ಗೊಬ್ಬರವನ್ನು ತಯಾರು ಮಾಡುವವರಿಗೆ ಬಹುಮಾನಗಳನ್ನು ಕೊಡಲಾಗುತ್ತದೆ. ಈ ವರ್ಷ ಕೊಡಗಿನಲ್ಲಿ ಎರಡು ಲಕ್ಷ ಟನ್ನು ಕಂಪೋಸ್ಟು ಗೊಬ್ಬರವನ್ನು ಮಾಡಬೇಕೆಂದು ನಿರ್ಣಯಿಸಲಾಗಿದೆ ಮತ್ತು ಪ್ರತಿಯೊಬ್ಬ ರೈತನೂ ತನ್ನ ಕೈಯ್ಯಲ್ಲಿರುವಷ್ಟು ಗೊಬ್ಬರವನ್ನು ಮಾಡಿ ಮೇಲೆ ತೋರಿಸಿದ ಗುರಿಯನ್ನು ಸಾಧಿಸಲು ಸಹಾಯ ಮಾಡಬೇಕೆಂದು ಕೋರಲಾಗಿದೆ.

(b) ಹಿಂಡಿ ಗೊಬ್ಬರ ಬಟವಾಡೆ–ಈ ವರ್ಷ 700 ಟನ್ನು ಹಿಂಡಿಗೊಬ್ಬರವನ್ನು ತಂದು ವ್ಯವಸಾಯ ಇಲಾಖೆಯ ಮತ್ತು ಸಹಕಾರ ಸಂಘಗಳ ಮೂಲಕ ಬಟವಾಡೆ ಮಾಡಲಾಗುತ್ತಿದೆ. ಈ ವರೆಗೆ ಗೊಬ್ಬರಕ್ಕೆ ಅರ್ಜಿ ಹಾಕಿಕೊಳ್ಳದವರು ಒಡನೆ ವ್ಯವಸಾಯ ಇಲಾಖಾ ಅಧಿಕಾರಿಗಳಿಗೆ ಯೂ ಯೂನಿಯನ್ನಿಗೆ ಅರ್ಜಿ ಬರೆದು ಕೊಂಡು ಅವರವರಿಗೆ ಬೇಕಾದ ಗೊಬ್ಬರವನ್ನು ಪಡಕೊಳ್ಳಬಹುದು. ಬರುವ ವರ್ಷಕ್ಕೆ ಬೇಕಾದ ಹಿಂಡಿಗೊಬ್ಬರವನ್ನು ತರಿಸಲು ಏರ್ಪಾಡುಮಾಡಲಾಗುತ್ತಿದೆ.

(c) ಮೂಳೆ ಗೊಬ್ಬರ ಮತ್ತು ಮತ್ತು ಸುಪರ್ ಫಾಸ್‌ಫೇಟ್–ಈ ವರ್ಷ ಹೆಚ್ಚು ಕಡಿಮೆ 250 ಟನ್ನು ಮೂಳೆ ಗೊಬ್ಬರ ಮತ್ತು 100 ಟನ್ ಸುಪರ್ ಫಾಸ್‌ಫೇಟ್‌ನ್ನು ತರಿಸಿ ಇವುಗಳನ್ನು ವಿಶ್ರಿತ ಗೊಬ್ಬರವಾಗಿ ಮಾರಾಟಮಾಡಲಾಗುತ್ತೆ.

ಮೇಲೆ ತೋರಿಸಿದ ಗೊಬ್ಬರ ಮತ್ತು ವಿಶ್ರಿತ ಗೊಬ್ಬರಗಳನ್ನು ಆಹಾರ ಪದಾರ್ಥಗಳ ಬೆಳೆಗಳಿಗೆ ಮೂಶ್ರ ಅರ್ಥ ಕ್ರಯದಲ್ಲಿ ಕೊಡಲಾಗುತ್ತದೆ. ಇವುಗಳ ಅವಶ್ಯಕತೆಯಿರುವವರು ವ್ಯವಸಾಯ ಇಲಾಖಾ ಅಧಿಕಾರಿಗಳಿಗಾಗಲೀ ಯೂ ಡೆಮಾನ್‌ಸ್ಟ್ರೇಟರುಗಳಿಗಾಗಲೀ ಅರ್ಜಿ ಹಾಕಿಕೊಂಡು ಅವರವರಿಗೆ ಬೇಕಾದ ಗೊಬ್ಬರಗಳನ್ನು ಪಡಕೊಳ್ಳಬಹುದು.

(d) ಹಸುರೆಲೆ ಗೊಬ್ಬರ–ಈ ವರ್ಷ ತಮ್ಮ ತಮ್ಮ ಭೂಮಿಗೆ ಹಸುರೆಲೆ ಗೊಬ್ಬರವನ್ನು ಹಾಕುವವರಿಗೆ ಪ್ರತಿ ನೂರು ಏಕ್ರಿಗಳಿಗೆ ಹೆಚ್ಚು ಕಡಿಮೆ 10 ರೂಪಾಯಿಯಂತೆ ಬಹುಮಾನ ಕೊಡುವಂತೆ ಏರ್ಪಾಡು ಮಾಡಲಾಗಿದೆ ಈ ಬಹುಮಾನವನ್ನು ವಿಶ್ರಿತ ಗೊಬ್ಬರದ ರೂಪತಿಯಲ್ಲಿ ಕೊಡಲಾಗುತ್ತದೆ. ಒಂದು ಏಕ್ರಿಗೆ ಕಡಿಮೆ ಮತ್ತು ಆರು ಏಕ್ರಿಗಳಿಗಿಂತ ಮಿಗಿಲಾಗಿ ಹಸುರೆಲೆ ಗೊಬ್ಬರ ಹಾಕಿರುವ ಸ್ಥಳವನ್ನು ಬಹುಮಾನ ಕೊಡುವ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ತಮ್ಮ ತಮ್ಮ ಗದ್ದೆಗಳಿಗೆ ಹಸುರೆಲೆ ಗೊಬ್ಬರ ಹಾಕುವವರು ವ್ಯವಸಾಯ ಇಲಾಖೆಯ ಸಿಬ್ಬಂದಿಗಳಿಗೆ ಅರ್ಜಿ ಹಾಕಿಕೊಂಡು ಅವರವರಿಗೆ ಸಿಕ್ಕುವ ಬಹುಮಾನವನ್ನು ಆದಷ್ಟು ಬೇಗನೆ ಹೊಂದಿಕೊಳ್ಳಬಹುದು.

(e) ಗೆಡ್ಡೆಗೆಣಸುಗಳ ಬೆಳೆಗಳು–ಈ ವರ್ಷ ಕೊಡಿಗೆ ಮತ್ತು ಪೊನ್ನಂಪೇಟೆ ವ್ಯವಸಾಯ ಇಲಾಖಾ ಕ್ಷೇತ್ರಗಳಲ್ಲಿ ಹೆಚ್ಚು ಕಡಿಮೆ ಮೂವತ್ತು ಏಕ್ರೆಗಳಷ್ಟು ಜಾಗದಲ್ಲಿ ಮರಗೆಣಸು ಸಿಹಿಗೆಣಸು ಮೊದಲಾದ ಗೆಡ್ಡೆಗೆಣಸುಗಳನ್ನು ಬೆಳೆಸಲು ಏರ್ಪಾಡು ಮಾಡಲಾಗಿದೆ ಮತ್ತು ಮರಗೆಣಸು ಬೆಳೆಸಲು ಇಚ್ಛಿಸುವವರಿಗೆ ನೆಡಲಿಕ್ಕೆ ಬೇಕಾದ ಮರಗಣಸಿನ ಕೊಂಬೆಗಳನ್ನು ಮುಫತ್ತಾಗಿ ಕೊಡಲಾಗುತ್ತದೆ. ತಮಗೆ ಬೇಕಾದಷ್ಟು ಮರಗೆಣಸಿನ ಕೊಂಬೆಗಳಿಗೆ ಒಡನೆ ವ್ಯವಸಾಯ ಇಲಾಖಾ ಅಧಿಕಾರಿಗಳಿಗೆ ಅರ್ಜಿ ಹಾಕಿಕೊಳ್ಳಬಹುದು.

(3) ಕಬ್ಬಿಣದ ಹತ್ಯಾರುಗಳು:–ಮೇಲೆ ನಮೂದಿಸಿದುವುಗಳಲ್ಲದೆ ವ್ಯವಸಾಯದ ಹತ್ಯಾರುಗಳನ್ನು ತಯಾರಿಸಲಿಕ್ಕಿರುವ ಕಬ್ಬಿಣದ ಸಾಮಾನುಗಳನ್ನೂ ಆಹಾರ ಪದಾರ್ಥದ ಬೆಳೆಗಳನ್ನೂ ಕಾಪಾಡಲು ಮುಳ್ಳು ತಂತಿಯನ್ನೂ, ನೀರು ಹಾಯಿಸಲಿಕ್ಕಿರುವ ಕಬ್ಬಿಣದ ಕೊಳವೆಗಳನ್ನೂ ಗಾಡಿ ಪಟ್ಟಿ, ಜಿಂಕ್‌ಶೀಟ್ ಮೊದಲಾದುವುಗಳನ್ನು ತರಿಸಿ ರೈತರಿಗೆ ಹಂಚುವ ಏರ್ಪಾಡು ಮಾಡಲಾಗುತ್ತಿದೆಯೆಂದೂ ಮತ್ತು ವ್ಯವಸಾಯದ ಉಪಯೋಗಕ್ಕಾಗಿ ಮೇಲಿನ ಹತ್ಯಾರುಗಳ ಅವಶ್ಯಕತೆಯಿರುವವರು ತಮಗೆ ಬೇಕಾದ ಹತ್ಯಾರುಗಳಿಗೆ ವೀರಾಜಪೇಟೆಯಲ್ಲಿರುವ ಕೋಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ನಿಗೆ ಅರ್ಜಿ ಹಾಕಿಕೊಳ್ಳಬಹುದೆಂದೂ ಸರ್ವರಿಗೆ ಈ ಮೂಲಕ ತಿಳಿಸಲಾಗಿದೆ. ಇಂಥಾ ಅರ್ಜಿಗಳ ಆಧಾರದ ಮೇಲೆ ಫೆಡರೇಶನು ವ್ಯವಸಾಯ ಇಲಾಖೆಗೆ ಹತ್ಯಾರುಗಳ ಪಟ್ಟಿಯನ್ನು ಕಳುಹಿಸುವುದಾಗಿಯೂ, ಪಟ್ಟಿಯಂತೆ ಹತ್ಯಾರುಗಳನ್ನು ತರಿಸಿ ಹಂಚುವ ಏರ್ಪಾಡನ್ನು ವ್ಯವಸಾಯ ಇಲಾಖೆಯವರು ಮಾಡವದೆಂದೂ ಈ ಮೂಲಕ ತಿಳಿಸಲಾಗಿದೆ. ಇದೇ ಏರ್ಪಾಡು ವ್ಯವಸಾಯಕ್ಕೆ ಬೇಕಾದ ಸೀಮೆಂಟಿಗೂ ಸಹ ಅನ್ವಯಿಸುತ್ತದೆ. ಪ್ರತಿಯೊಂದು ಅರ್ಜಿಯನ್ನು ಅರ್ಜಿಯ ತಾರೀಕು ಮತ್ತು ಹತ್ಯಾರುಗಳ ಸ್ಟಾಕನ್ನು ನೋಡಿ ಅರ್ಹತೆಯ ಪ್ರಕಾರ ಹತ್ಯಾರುಗಳನ್ನು ಕೊಡಲಾಗುತ್ತೆ.

ಕೊಡಗಿನ ಪ್ರತಿಯೊಬ್ಬ ರೈತನೂ ಮೇಲೆ ನಮೂದಿಸಿದ ಸಲಕರಣೆಗಳ ಉಪಯೋಗಗಳನ್ನು ಹೊಂದಿಕೊಂಡು ತನ್ನ ಕೈಯಲ್ಲಾದಷ್ಟು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಸಿ ದೇಶದಲ್ಲಿರುವ ಆಹಾರ ಪದಾರ್ಥದ ಮಟ್ಟಗಟ್ಟನ್ನು ಮುರಿಯಲು ಸಹಾಯಕರಾಗಬೇಕೆಂದು ಒತ್ತಿ ಕೋರಲಾಗಿದೆ.

ಬಿ ಎಸ್. ವರದರಾಜನ್.
ವ್ಯವಸಾಯ ಇಲಾಖಾ ಅಧಿಕಾರಿ.

WANTD.

A Manager for the Coorg Transport Ltd., Mercara on a Salary of Rs. 150-10-200/- with dearness allowance of Rs. 20/- per mensum. Apply with testimonials to the under signed by 15-7-51.

Mercara, 27—6—51. CHAIRMAN, The Coorg Transport Ltd.

॥ ಸ್ತ್ರೀ ದಾಕ್ಷಿಣ್ಯ ॥

ಲೇ:—ಕೆ. ಘ. ಮಂಜ್ರಾವಾಲಾ.

ನಮ್ಮ ಸ್ಮೃತಿಕಾರರೂ ಕವಿಗಳೂ ತಾ ಸ್ತ್ರಗ್ರಂಥಗಳಲ್ಲಿಯೂ ಕಾವ್ಯಗಳಲ್ಲಿಯೂ ಎಷ್ಟೋ ಕಡೆ ಸ್ತ್ರೀಯರ ಬಗ್ಗೆ ಅತ್ಯಂತ ಉದಾತ್ತ ಭಾವನೆ-ಧ್ಯೇಯಗಳನ್ನು ವ್ಯಕ್ತ ಗೊಳಿಸಿದ್ದು ಕಾಣಬರುತ್ತದೆ. ನಮ್ಮ ಕೆ ಲ ಮಹಾ ಸಾಧುಸಂತರು ಸ್ತ್ರೀಯರಲ್ಲಿ ಅ ಸಾಧಾರಣ ಗೌರವ ಮತ್ತು ದಾಕ್ಷಿಣ್ಯವ ನ್ನು ಪ್ರಕಟಿಸಿದ್ದಾರೆ. ಕೆಲ ಮತಪಂಥಗ ಳಲ್ಲಿ ಪರಮಾತ್ಮನನ್ನು 'ತಂದೆ' ಯೆಂದು ಕರೆ ಯುವಷ್ಟೇ 'ತಾಯಿ' ಯೆಂದು ಸಂಬೋಧಿಸಲಾ ಗಿದೆ. ಸೀತಾ, ಸಾವಿತ್ರಿ, ದಮಯಂತಿ ಮೊದಲಾದ ಅನೇಕ ಮಹಾ ಮಹಿಳೆಯ ರ ಹೆಸರುಗಳನ್ನು ರಾಮ, ಕೃಷ್ಣ, ಯುಧಿ ಷ್ಠಿರಾದಿ ಪುರುಷವೀರರ ಹೆಸರುಗಳಷ್ಟೇ ಭಕ್ತಿಯಿಂದ ಸ್ಮರಿಸುವರು. ನಿತ್ಯಜೀವನ ದಲ್ಲಾದರೂ ಅಜ್ಞಾನಭಾರ, ನಿರಕ್ಷರತೆ, ಒಮ್ಮೊಮ್ಮೆ ಜಗಳ ಇವಿಷ್ಟೆಲ್ಲ ಇದ್ದರೂ ಒ ಟ್ಟಿನ ಮೇಲೆ ಗಂಡ-ಹೆಂಡತಿ, ಮಾತೃ-ಪುತ್ರ, ಅತ್ತೆ-ಸೊಸೆಯರಿಗಿಂತ ಸಂಬಂ ಧದಲ್ಲಿ ಶಾಂತಿ, ಸಮಾಧಾನ, ಸೌಹಾರ್ದ, ಅನುಕಂಪಗಳು ಇಲ್ಲದಿಲ್ಲ. ಸಾಮಾನ್ಯ ವಾಗಿ ಸಂಸಾರದಲ್ಲಿ ಸುಖವಿಲ್ಲವೆಂದು ಹೇ ಳಬರುವದಿಲ್ಲ ಮನೆತನದ ಅನೇಕ ಶ್ರೇ ತ್ರಗಳಲ್ಲಿ ಗೃಹಿಣಿಯ ಮಾತೇ ವೇದವಾಕ್ಯ ವಾಗಿ ಉಳಿದಿದೆ. ಹೀಗಿದ್ದರೂ ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ದೃಷ್ಟಿ ಕೋನದಲ್ಲಿಯೂ ಗುಣಕೋಲನೆಯಲ್ಲಿ ಯೂ ಹೆಂಗಸಿನೊಡನೆ ನಮ್ಮ ವ್ಯವಹಾರ ದಲ್ಲಿಯೂ ಒಂದು ಹೇಯವಾದ ವಿಚಾರ ಧಾರೆಯಿ ದೆ. ಸಂಧಿಕಾಲಗಳಲ್ಲಿ ಅದು ಮ ರೆಯಿಂದ ಹೊರಗೆ ತಲೆಯಿಕ್ಕಿ ಅವಳ ಬ ಗ್ಗೆ ನಮ್ಮ ಸುಪ್ತಜೇತನದ ಅಭಿಪ್ರಾಯ ವೇನೆಂದು ಪ್ರಕಟಗೊಳಿಸುವುದು. ಆ ಅಭಿಪ್ರಾಯದ ಪ್ರಕಾರ, ಮನೆಯಲ್ಲಿಯೂ ಸಮಾಜದಲ್ಲಿಯೂ ಹೆಂಗಸಿನ ಸ್ಥಾನವು ಬ ಳಸಲು ಬರುವಷ್ಟು ಸುಸ್ಥಿತಿಯಲ್ಲಿರುವ ಮ ನೆಯು ಯಾವುದಾದರೂ ಪಾತ್ರೆ ಪರಡಿಗಿಂ ತಲೂ ಕೀಳೆಂಬಂತಿದೆ. ತಮ್ಮ ಹೊಲ ಮನೆ ಸೊತ್ತುಗಳ ರಕ್ಷಣೆಗಾಗಿ ಪ್ರಾಣ ಕೊಡಲು ಸಿದ್ಧರಾದ ಜನರಿಷ್ಟೋ ಸಿಗಬ ಹುದು; ಆದರೆ ತಮ್ಮ ಹೆಂಗಸರನ್ನು ಅಥ ವಾ ದನಕರುಗಳನ್ನುಳಿಸಿಕೊಳ್ಳಲು ಪ್ರಾ ಣಕೊಡಬಲ್ಲವರು ಸ್ವಲ್ಪ ವಿರಳ. ದನಕ ರುಗಳಿಗಾಗಿ ಜೀವ ಕೊಡುವವರೂ ಇರಬ ಹುದು; ಹೆಂಗಸರಿಗಾಗಿ ಮಾತ್ರ ಇಲ್ಲ. ಪ್ರಾಣರಕ್ಷಣೆಗಾಗಿ ಪಲಾಯನ ಮಾಡುವ ಪ್ರಸಂಗವೇ ಬಂದರೆ ಅವರು ಸಾಧ್ಯವಿದ್ದ ಷ್ಟು ಸೊತ್ತುಗಳನ್ನು ಕಲೆಯು ಮೇಲಾದ ರೂ ಹೊತ್ತುಕೊಂಡು ಹೋಗುವರು; ಆ ದರೆ ತಮ್ಮ ಜೀವಕ್ಕಾಗಲಿ ಸೊತ್ತಿಗಾಗಲಿ ಅಪಾಯ ಬರುವಂತಿದ್ದರೆ ಅವರು ತಮ್ಮ ಹೆಂಗಸರಿಗಾಗಿ ಕಾಯುವುದಿಲ್ಲ. ವಿಶ್ವಾಸ ದ ಪರೀಕ್ಷೆ ಬಂದಾಗ ಗಂಡಸು ಅನೇಕ ವೇಳೆ ವಿಶ್ವಾಸಘಾತ ಮಾಡುತ್ತಾನೆ. ಹೆಂ ಗಸಿನ ಪ್ರಾಣಮಾನಗಳು, ಅವಳ ಸ್ವಂತ ಮನೆಯಲ್ಲಿ ಕೂಡ, ಗಂಡಸಿನ ಕೈಯಲ್ಲಿ ಸು ರಕ್ಷಿತವಾಗಿನೆಯಿನ್ನ ಬರುವುದಿಲ್ಲ. ಅವ ಳು ಪ್ರಯಾಣ ಮಾಡುವಾಗಲೂ ಉತ್ಸವ ಸಮಾರಂಭಗಳಲ್ಲಿ ಜನ ನೆರೆದಲ್ಲಿ ಹೋಗು ವಾಗಲೂ ಅವಳಿಗೆ ಅಪಾಯಭಯವಿದ್ದೇ ಇದೆ. ಅವಳ ಬಂಧು ಬಳಗದವರು ಯಾ ರ ರಕ್ಷಣೆಯಲ್ಲಿ ಅವಳನ್ನು ಬಿಟ್ಟಿರುವ ರೋ ಅವರಿಂದಲೂ ಅವಳಿಗೆ ಭಯ ತಪ್ಪಿ ದ್ದಲ್ಲ. ದಿನಂಗತ ಅನಂಡೀ ಬಾಯಿ ಕ ರ್ವೆಯವರು ತಮ್ಮ ಚಿಕ್ಕ ಸುರಸ ಆತ್ಮಚ ರಿತ್ರೆಯಲ್ಲಿ ಸ್ವಂತ ಅನುಭವದಿಂದ ಕೆಲ ಉದಾಹರಣೆಗಳನ್ನು ಉಲ್ಲೇಖಿಸಿ. ತೀರ ಆತ್ಮೀಯ ಸ್ನೇಹಿತರು ಕೂಡ ಹೆಂಗಸಿನ ವಿಷಯದಲ್ಲಿ ಎಷ್ಟು ಅವಿಶ್ವಸನೀಯರಾಗಿ ರಬಹುದೆಂದು ತೋರಿಸಿಕೊಟ್ಟಿದ್ದಾ ಕೆ. ಇಂಥಾ ಅನುಭವಗಳು ಇನ್ನೂ ಅನೇಕ ಸ್ತ್ರೀಯರಿಗೆ ಬಂದಿರಬಹುದು. ಈಚೆಗೆ ಕೆ ಲ ವರ್ಷಗಳಿಂದ ಈ ಕೇಡು ಹೆಚ್ಚು ಹೆ ಚ್ಚಾಗುತ್ತಿದೆ. ಮಹಾಯುದ್ಧ ಅಥವಾ ಮನ್ವಂತರ ಮಹಾ ಸಂಸಾರಲೀಲೆಯು ಕಾ ಲದಲ್ಲಿಯೂ ತದನಂತರದಲ್ಲಿಯೂ ಗಂಡ ಸು ಎಳೆ ಹೆಣ್ಣು ಮಗುಗಳ ಮೇಲೆ ಕೂಡ ತನ್ನ ಕಾಮುಪಿಪಾಸೆ ಹಿಂಸಾಬುದ್ಧಿಗಳನ್ನು ತೀರಿಸಿಕೊಳ್ಳಲು ಸಿದ್ಧನಾಗುವಷ್ಟು ಸಂ ಯಮಶೂನ್ಯನಾಗುವಂತೆ ತೋರುತ್ತದೆ.

ಗಂಡಸರು ನಿರಪರಾಧಿ ಹೆಂಗಸರಲ್ಲಿ ಯೂ ಹುಡುಗಿಯಲ್ಲಿಯೂ ಹೇಯ ರೀತಿ ಯಲ್ಲಿ ನಡೆದುಕೊಂಡ ಬಗ್ಗೆ ಈಚೆಗೆ ನನ ಗೆ ಬಿಟ್ಟೂ ಬಿಡದೆ ವರದಿಗಳು ಬರತೊಡ ಗಿವೆ.

ಒಂದು ಸಂದರ್ಭದಲ್ಲಿ ೨೦ ವರ್ಷದೊ ಳಗಿನ ಯುವಕ ಉಪಾಧ್ಯಾಯನು ಇನ್ನೂ ಹತ್ತು ವರ್ಷವಾಗದ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿದ್ದನು. ಇನ್ನೊಂದ ರಲ್ಲಿ, ಸರಕಾರವಂದಿಗ ಅಧ್ಯಾಪಕನು ತನ್ನ ರಕ್ಷಕತ್ವದಲ್ಲಿ ತನ್ನ ಮನೆಯಲ್ಲೇ ಇದ್ದ ೧೩-೧೪ ವರ್ಷದ ಭೀರು ಹುಡುಗಿಯ ಮೇಲೆ ಮತ್ತೆ ಮತ್ತೆ ಅನ್ಯಾಯ ಮಾಡಿ ದ್ದನು. ಮತ್ತೊಂದರಲ್ಲಿ, ಅಷ್ಟೇ ವಯಸ್ಸಿನ ಹುಡುಗಿಯೊಬ್ಬಳು ೫೫ ವರ್ಷ ವ ಯಸ್ಸಿನ ಹೆಲವು ಮಕ್ಕಳುಳ್ಳ ತಪ್ಪ ಸ್ವಂತ ತಂದೆಯ ಕಾವು ಚೇಷ್ಟೆಗೆ ಅಂಜಿ ನೆರಮನೆ ಯಲ್ಲಿ ಆಶ್ರಯ ಹೊಂದಬೇಕಾಯಿತು. ಮಗುದೊಂದರಲ್ಲಿ, ಇಪ್ಪತ್ತು ವರ್ಷದ ಕ ಸ್ತೂರಬಾ ನಿಧಿಯ ಗ್ರಾಮಸೇವಿಕೆಯೊಬ್ಬ ಳ ಮೇಲೆ, ವಿಶ್ವಾಸಾರ್ಹನೆಂದು ಜಿಲ್ಲಾ ಮಂದಾಳಿನ ಶಿಫಾರಸು ಪಡೆದ, ಆ ಸ್ಥಳ ದ ಕಾಂಗ್ರೆಸ್ ಮತ್ತು ಜನಪದಸಮಿತಿಗ ಳ ಪದಾಧಿಕಾರಿಯೂದ ಹಳ್ಳಿಯ ಮುಂ ದಾಳೊಬ್ಬನು ಅತಿಚರಿಸಲೆಳಸಿದನು. ಈ ಘಟನೆಯಿಂದ ಯುವತಿಯರಾದ ಗ್ರಾಮ ಸೇವಿಕೆಯರಿಗೂ ನಿಧಿಯ ಸಂಘಟಕ ಕಾ ರ್ಯದರ್ಶಿಗೂ ಸಹಜವಾಗಿ ಆಂಜಿಕೆಯುಂ ಟಾಗಿದೆ. ಹಳ್ಳಿಯ ಹಿರಿಯರೂ ಮುಂ ದಾಳುಗಳೂ ಆದವರೇ ಇಷ್ಟು ಲೋಲುಪ ರಾಗಿದ್ದರೆ ಎಳೆಯ ಅನನುಭವಿ ಯುವತಿ ಯರು ಯಾರ ರಕ್ಷಣೆಯನ್ನು ನೆಚ್ಚಬೇ ಕು? ಅವರು ಹಿಂದೆಂದೂ ಕಂಡರಿಯದ ಹಳ್ಳಿಗಳಲ್ಲಿ ಅವರನ್ನು ಯಾರ ನೆರಳಲ್ಲಿ, ಮಾರ್ಗದರ್ಶನದಲ್ಲಿ ತಂದು ನಿಲ್ಲಿಸಬೇಕು?

ಬಹುಶಃ ಇವು ಅಪವಾದಗಳೆಂದು ಯಾರಾದರೂ ಹೇಳಬಹುದು. ಭಾರತ ದಂಥ ವಿಸ್ತಾರ ದೇಶದಲ್ಲಿ ಒಂದಲ್ಲ ಒಂ ದು ಕಡೆ ಇಂಥ ಘಟನೆಗಳು ಜರಗಿಯೇ ಜರಗುವುವು ಎಂದು ಅವರು ವಾದಿಸಲೂ ಬಹುದು. ಆದರಿಂದ ಇಡೀ ಸಮಾಜವೇ ಪತಿತವಾಗಿದೆಯೆಂದು ತೀರ್ಮಾನಿಸಲಾಗ ದು. ಆದರೆ ಕೆಳಗಿನ ಘಟನೆಗಳು ಸಾ ಮಾನ್ಯವಾಗಿ ಹೆಂಗಸಿನ ಬಗ್ಗೆ ಜನತೆಯು ಮನೋವೃತ್ತಿಯ ಚಿತ್ರವನ್ನು ತೆರೆದು ತೋರಿಸುತ್ತವೆ.

ಇದು ಪೂರ್ವ ಪಂಜಾಬದಲ್ಲಿ ನಡೆದ ಘಟನೆಯಂತೆ. ದುಸ್ಸಾಹಸಿ ಪಂಜಾಬೀ ಯುವಕನೊಬ್ಬನು ನಿರಾಶ್ರಿತ ಕನ್ಯೆಯೊ ಬ್ಬಳ ಮೇಲೆ ಅತ್ಯಾಚಾರ ಮಾಡಹೋದ ನಂತೆ. ಇದರಿಂದ ಉಳಿದ ನಿರಾಶ್ರಿತರು ಸಿಟ್ಟಿಗೆದ್ದು ಅಪರಾಧಿಯನ್ನು ಹಿಡಿದು ಜೆ ಸ್ಸಾಗಿ ಥಳಿಸಿದರು. ಅಷ್ಟರಲ್ಲೇ ಸಂತೃ ಪ್ತರಾಗದೆ, ಆಗಲೆ ಖಂಡ ರಷ್ಟು ದೊಡ್ಡ ಜಂಗುಳಿಯಾಗಿದ್ದ ಆ ನಿರಾಶ್ರಿತರು ಅವನ ಮನೆಯ ಮೇಲೇರಿ ಹೋಗಿ, ಅವನ ಬಂ ಧುಬಳಗದವರನ್ನು ಹೊಡೆದು ಬಡಿದು, ಅವನ ಹೆಂಡತಿಯನ್ನು ಬೀದಿಗೆಳೆದು, ಅ ವಳ ಬಟ್ಟೆಯಾಭರಣವನ್ನು ಹರಿದು ಬತ್ತಲೆ ಮಾಡಿ ಅವಳನ್ನು ಬೀದಿಯಲ್ಲಿ ನಾನಾ ಹೊಲಸು ಅಂಗಭಂಗಿಗಳನ್ನು ಪ್ರದರ್ಶಿಸುತ್ತ ಮೆರವ ಣಿಗೆ ಮಾಡಿದರು. ಇದರ ವಿರುದ್ಧ ಯಾ ವನೊಬ್ಬ ಗಂಡಸಾಗಲಿ ಹೆಂಗಸಾಗಲಿ ನಿ ಷೇಧ ಸೂಚಿಸಲು ಬೆರಳನ್ನು ಕೂಡ ಎತ್ತ ಲಿಲ್ಲ.

ಇವರು ನಿರಕ್ಷರಿ, ಅಸಂಸ್ಕೃತ ನಿ ರಾಶ್ರಿತರು; ಅವರ ಸ್ವಂತ ಕ್ಲೇಶಗಳ ಫಲ ವಾಗಿ ಅವರ ನೈತಿಕ ತೂಕ ತೀರ ತಪ್ಪಿದೆ; ಈ ಹೆಂಗಸಿನ ಗಂಡನ ಅಪರಾಧ ದಿಂದ ಅವರು ಉದ್ರಿಕ್ತರಾಗಿದ್ದರು ಎಂದೆ ಲ್ಲ ಸಮಾಧಾನ ಹೇಳುವವರಿರಬಹುದು. ಆದರೆ ನಾಗಪುರದಲ್ಲಿ ಜೀವನ ವಿಕಾಸ ಪ್ರ ದರ್ಶನದಲ್ಲಿ ನಡೆದ ಹೀನ ಘಟನೆಗೆ ಈ ಬಗೆಯ ಸಮಾಧಾನ ಕೂಡ ಹೇಳಲು ಸಾ ಧ್ಯವಿಲ್ಲ. ಅಲ್ಲಿ ನಡೆದದ್ದು ಕೇವಲ ಇ ಷ್ಟೇ-ಮೊದಲು ಪ್ರಸಿದ್ಧಿಸಿದ್ದ ಸಂಗೀತ ಕ ಚೇರಿಯನ್ನು ನಿಶ್ಚಿತ ಸಮಯ ಕಳೆದು ಬಹಳ ಹೊತ್ತಾಗುವ ವರೆಗೂ ಪ್ರೇಕ್ಷಕರ ನ್ನು ಕಾಯಿಸಿ, ಆ ಮೇಲೆ ರದ್ದುಗೊಳಿಸ ಲಾಯಿತು. ಪ್ರೇಕ್ಷಕ ಗಣದಲ್ಲಿ ಅನೇಕ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿ ಗಳೂ ಇತರ ಪುಂಡರೂ ಅಲ್ಲದೆ ಮಧ್ಯಮ ವರ್ಗದ ಹಲವು ಯುವತಿಯರಿದ್ದರು. ಕಾರ್ಯಕ್ರಮ ರದ್ದಾದ್ದನ್ನು ಕೇಳಿದೊಡನೆ, ಕಲಾಸಂಸ್ಕೃತಿಗಳ ಕೈವಾರಿಗಳೆನಿಸಿಕೊ ಳ್ಳುವ ಈ ಜನರು ಸದಸದ್ವಿವೇಕವನ್ನು ಕ ಳೆದುಕೊಂಡು ಪುಂಡರೂ ಪಕ್ಕಂಗಳೂ ಆದ ರು. ಅವರು ಕಿಡಿಕಿಯ ಗಾಜುಗಳನ್ನು ಒಡೆದು ಪುಡಿಪುಡಿ ಮಾಡಿ ದೀಪಗಳನ್ನು ನಂದಿಸಿ, ಹೆಂಗಸರ ಮೈಮೇಲೆ ಏರಿಹೋ ಗಿ ಅವರೊಡನೆ ಮೃಗಗಳೂ ನಾಚುವಂತೆ ನಡೆದುಕೊಂಡರು. ಶಾಂತಿಸುವ್ಯವಸ್ಥೆಯ ನ್ನು ಸ್ಥಾಪಿಸಬೇಕಾದರೆ ಪೊಲೀಸರಿಗೆ ಸಾ ಕಾಗಿ ಹೋಯಿತು. ಇದು ಬುದ್ಧಿಪೂ ರ್ವಕ ಉದ್ದಾಮತನವೇ ಸರಿ.

ಈ ಬಗೆಯ ವರ್ತನೆ ದಿನಹೋದಂತೆ ಹಬ್ಬ ತೊಡಗಿದೆ. ಶಾಲೆಗಳೂ, ವಿಶ್ವವಿ ದ್ಯಾಲಯಗಳೂ ದುರ್ನೀತಿಯ ತವರು ಮನೆಗಳಾಗಿವೆ. ಸಮ್ಮೇಲನಗಳಲ್ಲಿ ಪುಂ ಡಾಟಿಕೆ ಮಾಡುವುದು, ಅಧ್ಯಾಪಕರ ಮೇಲೆ, ಪ್ರತಿಸ್ಪರ್ಧಿ ವಿದ್ಯಾರ್ಥಿಗಳ ಮೇ ಲೆ, ತಮ್ಮ ಅವಿಷಯಗಳಿಗೆ ಬಲಿಯಾಗಲೊ ಪ್ಪದ ಹುಡುಗಿಯರ ಮೇಲೆ ಪ್ರಾಣಹಾರ ಕ ಆಕ್ರಮಣ ಮಾಡುವುದು ಅವರಿಗೆ ನೀರ ರು ಕುಡಿದಷ್ಟಾಗಿದೆ. ಈ ವಿದ್ಯಾ ಸಂಸ್ಥೆ ಗಳಲ್ಲಿ ಅವರಿಗೆ ದೊರೆಯುವ ಜ್ಞಾನವೂ ಅ ಷ್ಟಕಷ್ಟೆ. ಆ ವಾತಾವರಣದಲ್ಲಿರುವ ಬು ದ್ಧಿಸಂಸ್ಕಾರ ಸಾವರ್ಥ್ಯವಂತೂ ಇನ್ನೂ ಕಡಿಮೆ. ಹುಡುಗಿಯರನ್ನು ಹುಡುಗ ರು ಬರಬೀದಿಯಲ್ಲಿ ಬೆನ್ನಟ್ಟುತ್ತಾರೆ. ಈ ದುರ್ಬುದ್ಧಿಗಳಿಗೆ ಪಾಠ ಕಲಿಸುವ ದಿಟ್ಟತ ನವುಳ್ಳ ಹುಡುಡಿಯರ ಸಂಖ್ಯೆ ತೀರಾ ಕ ಡಿಮೆ. ಇನ್ನು ಕೆಲವರು ಅವರಿಂದ ಪಾ ರಾಗಲು ಯುಕ್ತಿಗಳನ್ನು ಹೂಡಬೇಕಾ ಗುತ್ತದೆ. ಹುಡುಗರ ಈ ವರ್ತನೆ ಪಶು ವೃತ್ತಿಗಿಂತಲೂ ಕೀಳು; ಪಶುಗಳು ಅವರಿ ಗಿಂತ ಎಷ್ಟೋ ಚೆನ್ನಾಗಿ ನಡೆದುಕೊಳ್ಳು ತ್ತವೆ.

ಈಗ ಕೆಲವು ವರ್ಷಗಳಿಂದ ನಾವು ಸಂಸ್ಕೃತಿಯನ್ನು ಕುರಿತು ಮಾತಾಡುವು ದಕ್ಕೆಲ್ಲಕ್ಕೆ ಮೇ ಇಲ್ಲ. ನಾವು ಸಾಂಸ್ಕೃತಿ ಕ ಸಮ್ಮೇಳನಗಳನ್ನು ಕೂಡಿಸುತ್ತೇವೆ. ಹೆಚ್ಚು ಕಡಿಮೆ ಪ್ರತಿಯೊಂದು ಸಭೆ ಸ ಮ್ಮೇಳನದಲ್ಲೂ ಸಾಂಸ್ಕೃತಿಕ ಕಾರ್ಯಕ ಮಗಳಿದ್ದೇ ಇರುತ್ತವೆ. ನಮ್ಮ ಪ್ರಾಚೀ ನ ಸಂಸ್ಕೃತಿಯನ್ನು ಹೆಮ್ಮೆಯಿಂದ ಹೇಳಿ ಕೊಂಡು ಅದರ ಉಜ್ಜೀವನದ ಮಾತಾ ಡುತ್ತೇವೆ. ನಮ್ಮಲ್ಲಿ ಪೌರ ಸಂಸ್ಕೃತಿ ಇದೆ. ಮೂಲನಿವಾಸಿ ಸಂಸ್ಕೃತಿ ಇದೆ. ಆರ್ಯ ಸಂಸ್ಕೃತಿ ಇದೆ, ಇಸ್ಲಾಮಿ ಸಂ ಸ್ಕೃತಿ ಇದೆ, ಸೀಖ ಸಂಸ್ಕೃತಿಗಳಿವೆ; ಗು ಜರಾತಿ, ಮಹಾರಾಷ್ಟ್ರ ಮತ್ತು ಇತರ ಪ್ರಾಂತೀಯ ಸಂಸ್ಕೃತಿಗಳೂ ಇವೆ. ಆದ ರೆ ಭಾರತದಲ್ಲೆಲ್ಲಾ ಸ್ತ್ರೀಯರ ತನುಮಾ ನಗಳಿಗೆ ಭಯವನ್ನುಂಟುಮಾಡುತ್ತಿರುವ ಈ ಸಂಸ್ಕೃತಿ ಯಾವುದೆಂದು ಯಾರಾದರೂ ದಯವಿಟ್ಟು ಹೇಳುವರೆ? ಭಾರತದ ಪು ರುಷಜಾತಿಯಲ್ಲಿ ಈ ಪೈಶಾಚಿಕ ಉದ್ರೇ ಕ ಎಲ್ಲಿಂದ ಬಂತು? ಮೂರು ನಾಲ್ಕು ಸಾವಿರ ವರ್ಷಗಳ ಹಿಂದೆ ವ್ಯಾಸನು ದ್ರೌ ಪದೀ ವಸ್ತ್ರಾಪಹಾರದ ಕಥೆಯನ್ನು ಹಾ ಡಿದಂದಿನಿಂದ ಭಾರತೀಯ ನಾರಿಯರು, ಕೌರವರ ಅತ್ಯಾಚಾರದಿಂದ ತನ್ನನ್ನು ಕಾ ಪಾಡಲು ದ್ರೌಪದಿ ಹಾಡಿದ ಮೊರೆಯನ್ನು ಉಚ್ಚರಿಸುತ್ತ ಬಂದಿದ್ದಾರೆ. ಆದರೆ ಆ ಘಟನೆಯೂ ಹಳತಾಗಿಲ್ಲ, ಮೊರೆಯೂ ಹ ಳಸಿದಂತಿಲ್ಲ. ನಿಸ್ಸಹಾಯ ದ್ರೌಪದಿಯ ರೂ ದುಷ್ಟ ಕೌರವರೂ ನಿರಂತರವಾಗಿ ಉ ಳಿದಿರುವಂತೆ ಮತ್ತು ಕಾಲ ಹೋದ ಹಾಗೆ ವಿಪುಲವಾಗುತ್ತಿರುವಂತೆ ತೋರುತ್ತದೆ.

ವೈಯಕ್ತಿಕವಾಗಿ ಉದಾತ್ತ ಗುಣಪ ರಿಪೂರ್ಣರಾದ ಜನರಿಗೆ ಭಾರತದಲ್ಲಿ ಕೊ ರತೆಯಿಲ್ಲ. ಆದರೆ ಭೀಷ್ಮ ದ್ರೋಣರೂ ಅಂಥವರೇ ಇದ್ದರು. ಇವರ ವೈಯಕ್ತಿಕ್ಕ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿತ್ತು.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:–ಲಾಲ ಶಂಕರ್ ಲಾಲ್.
ಮುಖ್ಯ ಖಚೇರಿ:– ಹೊಸ ಡೆಲ್ಲಿ.
52–10 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:–Life, Fire, Motor, and Marine.

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ½" ⅝" ¾" ⅞" 1" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ವಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–42

Edited, Printed and Published by P. I. Belliappa at 'Kodagu' Press. Mercara, for 'Kodagu' Ltd.

ಪಾವಿತ್ರ್ಯವು ಬೀಭತ್ಸ ಸ್ವಾರೂಪಿಕ ಅನ್ಯಾಯಗಳನ್ನು ನಿವಾರಿಸಲು ಸಾಲದು. ಕೆಡುಕಿನ ನಿರುದ್ಧ ಒಂದಾಗಿ ಪ್ರತಿಭಟಿಸಲು ಎದ್ದು ನಿಲ್ಲದ ಸಜ್ಜನಿಕೆಗೆ ಕಾಸಿನ ಬೆಲೆಯಿಲ್ಲ. ಅದರ ಒಟ್ಟು ಪರಿಣಾಮ ಕೆಡುಕನ್ನು ಮಟ್ಟಿಡುವುದರಲ್ಲಿ ಅಥವಾ ಅವರ ಬಗ್ಗೆ ಪಿಸುನುಡಿಯಲ್ಲೆ ಮಾತಾಡುವುದರಲ್ಲಿ ಮಾತ್ರ ಅದರಿ ಆ ಸಜ್ಜನಿಕೆಯಿಂದ ಏನು ಫಲ? ಅದು ಬರಿ ಹರಟೆಯೆನಿಸಿತೇ ಹೊರತು ಪರಿಹಾರವೆನಿಸಲಿಕ್ಕಿಲ್ಲ

ಹೆಂಗಸರೂ ಹೆಚ್ಚು ಧೈರ್ಯಶಾಲಿಗಳಾಗಬೇಕು. ಉನ್ನತ ಚಾರಿತ್ರದ ಸಾವಿರಾರು ಹೆಂಗಸರಿರುವರೆಂಬಲ್ಲಿ ಸಂದೇಹವಿಲ್ಲ. ಆದರೆ ಅಂಥವರು ಪರಿಶುದ್ಧ ಚಾರಿತ್ರದ ಪರಿಣಾಮವೋ ಎಂಬಂತೆ ವ್ಯಭಿಚಾರಿಣಿಯರಿಗಿಂತ ದುರ್ಬಲರಾಗಿರುವುದೇ ಹೆಚ್ಚು. ಜಾರಿಣಿಯರು ಗಂಡಸರಿಗೆ ಹೆದರುವುದಿಲ್ಲ. ಮನಸು ಬಂದರೆ ಅವರು ತಮ್ಮನ್ನೂ ತಮ್ಮ ಆಶ್ರಿತರನ್ನೂ ಗಂಡಸರ ಆಕ್ರಮಣದಿಂದ ಯಶಸ್ವಿಯಾಗಿ ರಕ್ಷಿಸಿಕೊಳ್ಳಬಲ್ಲರು. ಅಲ್ಲದೆ ಗಂಡಸಿನ ಕಾಮತೃಷ್ಣೆಗೆ ಬಲಿಯಾದ ಹೆಂಗಸರ ಮೇಲೆ ಪತಿವ್ರತೆಯರಿಗಿಂತ ವ್ಯಭಿಚಾರಿಣಿಯರೇ ಹೆಚ್ಚು ಸಹಾನುಭೂತಿ ತೋರಿಸುತ್ತಾರೆ. ಪ್ರತಿನಿತ್ಯವೆಯಂಗೆ ಗಂಡಸರನ್ನು ಎದುರಿಸಲು ಭಯವಾಗುತ್ತದೆ. ಆದರಿಂದ ಅವರು ಗಂಡಸಿನ ಅನ್ಯಾಯಕ್ಕೆ ಗುರಿಯಾದವರ ಮೇಲೆ ದಯೆತೋರಿಸಲು ಹಿಂದೆಮುಂದೆ ನೋಡುತ್ತಾರೆ. ಹಾಗೆ ಬಲಿಯಾದವರು ದೂರವಾಡಲಾರದಷ್ಟು ಹತ್ತಿರದವರಾಗಿದ್ದರೆ ಆವರು ಇಡೀ ಘಟನೆಯನ್ನೇ ಮುಚ್ಚಿಡಲು ನೋಡುವರು ಹೊರತು ಆಪರಾಧಿಯ ವಿರುದ್ಧ ಬೊಬ್ಬಿಟ ಎಬ್ಬಿಸುವುದಿಲ್ಲ ಈ ಬಗೆಯ ಸಜ್ಜನಿಕೆಗೆ ಏನೂ ಬೆಲೆಯಿಲ್ಲ. ಅದು ಅಹಿಂಸೆಯಿಂದಾಗಲಿ ಸತ್ಯಪ್ರಿಯತೆ ಅಥವಾ ಪಾತಿವ್ರತ್ಯ ಪ್ರಿಯತೆಯಿಂದಾಗಲಿ ಹುಟ್ಟಿದುದಲ್ಲ. ಅದು ಬರಿ ಭೀರುತ್ವ, ನಿಷ್ಕರ್ಮತ್ವ ಮತ್ತು ಬಲಹೀನ ಸಜ್ಜನಿಯೆನಿಸುತ್ತದೆ. ಅದು ಸ್ತ್ರೀ ಜಾತಿಯ ಮಾನವನ್ನು ರಕ್ಷಿಸಲಾರದಷ್ಟಲ್ಲದೆ ಅದರ ಬಗ್ಗೆ ಗೌರವವನ್ನು ವರ್ಧಿಸಲೂ ಆರದು.

ಎಲ್ಲ ಮುಖ್ಯ ಮುಖ್ಯ ಸ್ಥಳಗಳಲ್ಲಿಯೂ ಗೃಹರಕ್ಷಕ ದಳಗಳು ಸಂಘಟಿಸಲ್ಪಡುತ್ತಿವೆಯಂತೆ. ಅವರು ನಮ್ಮ ಹೆಣ್ಣು ಮಕ್ಕಳನ್ನು ಹೇಗೆ ರಕ್ಷಿಸುತ್ತಿದ್ದಾರೆ?

ಪಂಜಾಬದಲ್ಲಿ ಗವರ್ನರರ ಆಡಳಿತ.

ಪಂಜಾಬದ ಆಡಳಿತೆಯನ್ನು ಅಲ್ಲಿನ ಗವರ್ನರರ ಹಸ್ತಗತ ಮಾಡಿ ಅವರೇ ಸರಕಾರದ ಸೂತ್ರಗಳನ್ನು ನಡೆಸಬೇಕೆಂದು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಮೊನ್ನೆ ಬುಧವಾರ ದಿನ ಸಂಜೆ ಘೋಷಣೆ ಹೊರಡಿಸಿದರು. ಪಂಜಾಬ ಗವರ್ನರ್ ಸರ್ ಚಂದುಲಾಲ ತ್ರಿವೇದಿಯವರು ಮುಖ್ಯ ಮಂತ್ರಿ ಡಾ. ಭಾರ್ಗವರ ಮತ್ತು ಅವರ ಆರು ಮಂದಿ ಸಹದ್ಯೋಗಿಗಳ ರಾಜಿನಾಮೆಯನ್ನು ಸ್ವೀಕರಿಸಿರುವರು.

ಪಂಜಾಬದಲ್ಲಿ ಗವರ್ನರರ ರಾಜ್ಯ ಸ್ಥಾಪನೆಯೊಗಲು ಅಲ್ಲಿನ ಕಾಂಗ್ರೆಸ್ ಪಕ್ಷವೇ ಕಾರಣಭೂತವಾಗಿರುತ್ತದೆ. ಶಾಸನ ಸಭೆಯಲ್ಲಿ ಬಹುಮತವಿದ್ದ ಕಾಂಗ್ರೆಸ್ ಪಕ್ಷವು ಇಬ್ಬಾಗವಾಗಿ ಒಡೆದು ಆವುಗಳಲ್ಲಿ ಪರಸ್ಪರ ಕಚ್ಚಾಟಗಳು ಆರಂಭವಾದುವು. ಶ್ರೀ| ಭೀಮಸೇನ ಸಾಚಾರರು ಒಮ್ಮೆ ಮುಖ್ಯ ಮಂತ್ರಿಗಳಾಗಿ ಅಧಿಕಾರ ಚಲಾಯಿಸಿದರೆ ಅನಂತರ ಡಾ ಭಾರ್ಗವರು ಮುಖ್ಯ ಮಂತ್ರಿ ಪದಕ್ಕೇರಿದರು. ಪರಿಣಾಮವಾಗಿ ಪಂಜಾಬದ ರಾಜಕೀಯದಲ್ಲಿ ಅನಿಶ್ಚಿತ ಪರಿಸ್ಥಿತಿ ನೆಲೆನಿಂತಿತು. ಮಂತ್ರಿ ಮಂಡಳದ ಕಾರ್ಯವು ಕುಂಠಿತವಾಯಿತು. ಪ್ರಾಂತದ ಹಿತಸಾಧನೆಯಲ್ಲಿ ಮಂತ್ರಿ ಮಂಡಳವು ನಿರತವಾಗುವ ಬದಲಿಗೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದರಲ್ಲೇ ನಿರತವಾಯಿತು.

ಈ ಅವಸ್ಥೆಯನ್ನು ಗಮನಿಸಿದ ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ಕೆಲ ಸಮಯದ ಹಿಂದೆ ಪಂಜಾಬ ಶಾಸನ ಸಭೆಯ ಕಾಂಗ್ರೆಸ್ ಪಕ್ಷಕ್ಕೆ ಒಂದು ಸೂಚನೆ ಕಳುಹಿಸಿ ಎರಡೂ ಪಕ್ಷದ ಪ್ರಾತಿನಿಧ್ಯವುಳ್ಳ ಮಂತ್ರಿ ಮಂಡಳ ಪಂಜಾಬದಲ್ಲಿ ಏರ್ಪಡಿಸಬೇಕೆಂದು ತಿಳಿಯಪಡಿಸಿತು. ಮುಖ್ಯ ಮಂತ್ರಿ ಡಾ| ಭಾರ್ಗವರು ಆ ಸಲಹೆಯನ್ನು ಗಮನಿಸದೆ ತನ್ನ ತಕ್ಷವನ್ನು ಬಲಪಡಿಸುವ ಪ್ರಯತ್ನ ನಡೆಸಿದರು. ವಿರೋಧ ಗುಂಪಿನವರನ್ನು ಮಂತ್ರಿ ಮಂಡಳದಲ್ಲಿ ಸೇರಲು ಬಿಟ್ಟಲ್ಲಿ ಕಾಂಗ್ರೆಸ್ ಪಕ್ಷದ ಕಚ್ಚಾಟಗಳು ಮಂತ್ರಿ ಮಂಡಳದೊಳಗೂ ಬಂದು ಅದೀಗಲ್ಲೂ ಕಚ್ಚಾಟ ಪ್ರಾರಂಭವಾಗುವುದೆಂದು ಅವರು ಹೆದರಿದರು.

ಕೇಂದ್ರ ಪಾರ್ಲಿಮೆಂಟರಿ ಬೋರ್ಡು ಇದನ್ನು ಗಮನಿಸಿ ಪಂಜಾಬದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವ ತನಕ ಕಾಂಗ್ರೆಸ್ ಸರಕಾರವನ್ನು ವಿಸರ್ಜಿಸಿ ಅಲ್ಲಿ ಗವರ್ನರರ ರಾಜ್ಯವನ್ನು ಏರ್ಪಡಿಸುವ ನಿರ್ಣಯ ಮಾಡಿತು.

ಸರಕಾರವು ರಾಜಿನಾಮೆ ಕೊಡಬೇಕೆಂದು ಡಾ. ಭಾರ್ಗವರಿಗೆ ಪಾರ್ಲಿಮೆಂಟರಿ ಬೋರ್ಡು ತಿಳಿಯಪಡಿಸಿದಾಗ ಅವರು ರಾಜಿನಾಮೆ ಕೊಡಲು ಸಮ್ಮತಿಸಲಿಲ್ಲವೆಂದು ಸದ್ದಿ ಹಬ್ಬಿತು. ಆದರೆ ಡಾ. ಭಾರ್ಗವರು ರಾಜಿನಾಮೆ ಕೊಟ್ಟನಂತರ ತಾವು ಆ ಬಗ್ಗೆ ವಿಳಂಬ ಮಾಡಿದ ಕಾರಣಗಳನ್ನು ವಿವರಿಸುತ್ತಾ ಪಂಜಾಬವು ವಿಭಜನೆಯು ಪರಿಣಾಮವಾಗಿ ಬಹಳ ಹಾನಿಗೊಳಗಾಗಿದ್ದು ನಿರಾಶ್ರಿತರ ಪುನರ್ನಿವೇಶನ ಕಾರ್ಯವು ಅತ್ಯಂತ ಜರೂರಾತಿನದಾಗಿದೆ. ಕಾಂಗ್ರೆಸ್ ಮಂತ್ರಿ ಮಂಡಳವು ರಾಜಿನಾಮೆ ಕೊಟ್ಟು ಹೊರಹೋದಲ್ಲಿ ಕಾರ್ಯಗಳೆಲ್ಲಾ ಕುಂಠಿತವಾಗುವವು ಎಂದು ಹೇಳಿದರು. ಈ ಮಧ್ಯೆ ಡಾ. ಭಾರ್ಗವರು ಪಾರ್ಲಿಮೆಂಟರಿ ಬೋರ್ಡಿನ ಆಜ್ಞೆಯನ್ನು ಉಲ್ಲಂಘಿಸಿ ಪ್ರತ್ಯೇಕ ಮಂತ್ರಿ ಮಂಡಳವನ್ನು ರಚಿಸುವುದರಲ್ಲಿ ಮಗ್ನರಾದರೆಂದೂ ಸುದ್ದಿಯಿತ್ತು.

ಈಗ ಪಂಜಾಬವು ಗವರ್ನರರ ಆಡಳಿತಕ್ಕೊಳಗಾಗಿದೆ. ಮುಂದಿನ ಸಾರ್ವತ್ರಿಕ ಚುನಾವಣೆಗಳ ತನಕ ಅದು ಗವರ್ನರರ ಆಡಳಿತೆಯಲ್ಲೇ ಉಳಿಯುವುದು. ಆಷ್ಟರ ತನಕ ಗವರ್ನರರು ಸಲಹೆಗಾರರ ಸಹಾಯದಿಂದ ಆಡಳಿತೆ ನಡೆಸಲಿರುವರು.